Language and Literacy

TESS India

# Storytelling, songs, role play and drama

## ಕಥೆ ಹೇಳುವುದು, ಹಾಡುಗಳು, ಪಾತ್ರಾಭಿನಯ ಮತ್ತು ನಾಟಕ





Teacher Education through School-based Support in India
www.TESS-India.edu.in

The Open University

UKaid from the British people

CC BY SA
http://creativecommons.org/licenses/

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF 2005) ಮತ್ತು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2009)ಗಳು ಭಾರತದಲ್ಲಿನ ಶಿಕ್ಷಣಕ್ಕಾಗಿ ಮಹತ್ವಾಕಾಂಕ್ಷೆಯ ದೃಷ್ಟಿಕೋನವನ್ನು ನೀಡಿವೆ. ಇದರಲ್ಲಿ ಎಲ್ಲಾ ಶಾಲೆಗಳು ಸದೃಢವಾದ ಕಲಿಕಾ ವಾತಾವರಣವನ್ನು ಒದಗಿಸುತ್ತವೆ. ಈ ದೃಷ್ಟಿಕೋನವನ್ನು ಸಾಕಾರಗೊಳಿಸಲು ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ(ತರಬೇತುದಾರರಿಗೆ) ಸಹಾಯ ಹಸ್ತ ನೀಡುವುದೇ ಟೆಸ್-ಇಂಡಿಯಾ OERನ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ಶಿಕ್ಷಕರನ್ನು 'ವಿದ್ಯಾರ್ಥಿ'ಗಳೆಂದು ಪರಿಗಣಿಸಿ, ಅವರು ತಮ್ಮ ವೃತ್ತಿಯಲ್ಲಿ ಅವಶ್ಯಕವಿರುವ ಸಾಧನ ಹಾಗೂ ವಿಧಾನಗಳನ್ನು ಬೆಳೆಸಿಕೊಳ್ಳುವಲ್ಲಿ ನೈಪುಣ್ಯತೆಯನ್ನು ಹೊಂದುವಂತೆ, ಬೋಧನೆಯ ಮತ್ತು ಕಲಿಕೆಯ ವಿಧಾನಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಾಯವಾಗುವಂತೆ ಸಂಪನ್ಮೂಲ ರಚಿಸಲಾಗಿದೆ. OER ಮುಖ್ಯ ಲಕ್ಷಣವೆಂದರೆ ಶಿಕ್ಷಕರು ಘಟಕಗಳನ್ನು, ವೈಯಕ್ತಿಕ ಚಟುವಟಿಕೆಗಳನ್ನು, ಕೇಸ್ ಸ್ಟಡಿಗಳನ್ನು ಬಳಸಿ, ಅವರ ವೃತ್ತಿ ಕೌಶಲ್ಯವನ್ನು ವೃದ್ಧಿಸಿಕೊಂಡು ಅವುಗಳನ್ನು ನೂತನ ಸಂದರ್ಭಗಳಿಗೆ ಮತ್ತು ವಿಷಯಗಳಿಗೆ ಅನ್ವಯಿಸುವುದು.

ಎಲ್ಲಾ ವಿಷಯಗಳಿಗೂ ಹಾಗೂ ಎಲ್ಲಾ ಹಂತಗಳಿಗೂ ಅನ್ವಯವಾಗುವ ಈ ಪ್ರಮುಖ ಸಂಪನ್ಮೂಲಗಳು, ಭಾರತದ ಶಿಕ್ಷಣ ನೀತಿ ಮತ್ತು ಟೆಸ್-ಇಂಡಿಯಾ OERನಲ್ಲಿನ ಮಾದರಿಯಂತೆ, ಶಿಕ್ಷಕರಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಮುಖ ವಿಧಾನಗಳ ಬಗ್ಗೆ ಮುಂದುವರಿದ ಪ್ರಾಯೋಗಿಕ ಸಲಹೆಗಳನ್ನು ನೀಡುತ್ತವೆ. ಟೆಸ್-ಇಂಡಿಯಾದ ಪ್ರಾಯೋಗಿಕ ತತ್ವಗಳನ್ನೊಳಗೊಂಡಂತೆ ವಿದ್ಯಾರ್ಥಿಗಳನ್ನು ಸಂಘಟಿಸುವ ವಿಧಾನಗಳು, ಕಲಿಕಾ ಚಟುವಟಿಕೆಗಳು ಮತ್ತು ಶಿಕ್ಷಕ-ವಿದ್ಯಾರ್ಥಿ ಮತ್ತು ವಿದ್ಯಾರ್ಥಿ-ವಿದ್ಯಾರ್ಥಿಗಳ ನಡುವಿನ ಒಡನಾಟವನ್ನು ಏರ್ಪಡಿಸುವ ವಿಧಾನಗಳನ್ನು ಒಳಗೊಂಡಿದೆ. ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಕರಿಗೆ(ತರಬೇತುದಾರರಿಗೆ) ವೆಬ್‌ಸೈಟ್ ನಲ್ಲಿ ಈ ಪ್ರಮುಖ ಸಂಪನ್ಮೂಲಗಳು ಲಭ್ಯವಿದೆ.

**ವೀಡಿಯೋ ಸಂಪನ್ಮೂಲಗಳು** 

ಟೆಸ್- ಇಂಡಿಯಾದವರು ತಯಾರಿಸಿದ ವೀಡಿಯೋ ಕ್ಲಿಪ್‌ಗಳ ಸಮೂಹವು ತರಗತಿಯಲ್ಲಿನ ಭಾಗವಹಿಸುವಿಕೆಯ ಪ್ರಮುಖ ತಂತ್ರಗಳನ್ನು ವಿವರಿಸುತ್ತವೆ. (ಪ್ರಮುಖ ಸಂಪನ್ಮೂಲಗಳ ವಿಷಯಗಳಿಗೆ ಸರಿಹೊಂದುವಂತೆ) ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುವಿಕೆಯ ಅಭ್ಯಾಸಗಳನ್ನು ಭಾರತೀಯ ತರಗತಿಗಳಲ್ಲಿ ಬಳಸುವುದನ್ನು ಈ ಕ್ಲಿಪ್ ಗಳಲ್ಲಿ ನಾವು ಕಾಣಬಹುದಲ್ಲದೇ, ನಿರ್ದಿಷ್ಟ ಕ್ರಿಯೆಗಳನ್ನು ಹಾಗೂ ನಡತೆಗಳನ್ನು ವೀಕ್ಷಕರು ಗುರುತಿಸಲು ವೀಕ್ಷಕ ವಿವರಣೆಯನ್ನು ಕೇಳಬಹುದು. ಈ ವೀಡಿಯೋ ಕ್ಲಿಪ್‌ಗಳನ್ನು ಹಿಂದಿ ತರಗತಿಗಳಲ್ಲಿ ಚಿತ್ರೀಕರಿಸಿದ್ದು, ವಿವಿಧ ರಾಜ್ಯಗಳಿಗೆ ಅನುಗುಣವಾಗಿ ವೀಕ್ಷಕ ವಿವರಣೆಯನ್ನು ಭಾಷಾಂತರಿಸಲಾಗಿದೆ. ಈ ವೀಡಿಯೋ ಕ್ಲಿಪ್‌ಗಳಿಗೆ ಲಿಂಕ್‌ಗಳನ್ನು, ವೀಡಿಯೋ ಚಿತ್ರದ ಮೂಲಕ OERಗಳಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ತೋರಿಸಿದ್ದು, ಅಂತರ್ಜಾಲದ ಮೂಲಕ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಈ ವೀಡಿಯೋ ಕ್ಲಿಪ್‌ಗಳನ್ನು ಟ್ಯಾಬ್ಲೆಟ್, ಪಿಸಿ, ಡಿ.ವಿ.ಡಿ, ಮೊಬೈಲ್ ಫೋನ್‌ಗಳಲ್ಲಿ ಹಾಗೂ ಎಸ್.ಡಿ ಕಾರ್ಡ್ ಮೂಲಕ ಬಳಸಲು, ಬಳಕೆದಾರರು ಇವುಗಳನ್ನು ಡೌನ್‌ಲೋಡ್ ಮಾಡಬಹುದಾಗಿದೆ. (http://www.tess-india.edu.in/)

*Version 2.0     LL05TESSKNV1*

*Except for third party materials and otherwise stated, this content is made available under a Creative Commons Attribution-ShareAlike licence: http://creativecommons.org/licenses/by-sa/3.0/*

## ಈ ಘಟಕದಲ್ಲೇನಿದೆ?

ಕಥೆ ಹೇಳುವುದು ಹಲವು ರೀತಿಯಲ್ಲಿ ತರಗತಿಯಲ್ಲಿನ ಕಲಿಕೆ ಹಾಗೂ ಭಾಷಾ ಬೆಳವಣಿಗೆಗೆ ಕೊಡುಗೆ ಸಲ್ಲಿಸುತ್ತದೆ ಎಂಬುದರ ಬಗ್ಗೆ ಈ ಘಟಕವು ನಿಮ್ಮ ಗಮನವನ್ನು ಸೆಳೆಯುತ್ತದೆ. ನಿಮ್ಮ ವಿದ್ಯಾರ್ಥಿಗಳಿಗೆ ಕಥೆ ಹೇಳುವ ಅವಧಿಯನ್ನು ಯೋಜಿಸುವ ಹಾಗೂ ಮೌಲ್ಯಮಾಪನ ಮಾಡುವ ರೀತಿಯನ್ನು ತೋರಿಸಿಕೊಡುತ್ತದೆ. ಅಲ್ಲದೇ ನಿಮ್ಮ ವಿದ್ಯಾರ್ಥಿಗಳು ಸ್ವತಃ ಕಥೆಗಳನ್ನು ಸಂಗ್ರಹಿಸಲು ಹಾಗೂ ಕಥೆಗಳನ್ನು ಹೇಳಲು ನೀವು ಪ್ರೋತ್ಸಾಹಿಸಬಹುದಾದ ವಿಧಾನಗಳನ್ನು ಸೂಚಿಸುತ್ತದೆ. ಅತ್ಯುತ್ತಮವಾಗಿ ಹೇಳಿದ ಕಥೆಯು ವಿದ್ಯಾರ್ಥಿಗಳ ಮನಸ್ಸಿನಲ್ಲಿ ದೀರ್ಘಕಾಲ ಉಳಿಯುವ ಅನುಭವವಾಗಿರುತ್ತದೆ.

## ಈ ಘಟಕದಲ್ಲಿ ನೀವೇನು ಕಲಿಯುವಿರಿ?

- ಕಥೆ ಹೇಳುವ ಅನೇಕ ತಂತ್ರಗಳು.
- ವಿದ್ಯಾರ್ಥಿಗಳಿಗೆ ಕಥೆ ಹೇಳುವ ಅವಧಿಯನ್ನು ಯೋಜಿಸುವುದು ಹಾಗೂ ಮೌಲ್ಯಮಾಪನ ಮಾಡುವುದು.
- ಕಥೆ ಹೇಳಲು ಸಮುದಾಯ ಸಂಪನ್ಮೂಲವನ್ನು ಪಡೆಯುವುದು.

## ಈ ಮಾರ್ಗ ಏಕೆ ಮುಖ್ಯ?

ಕಥೆ ಹೇಳುವುದು ಗಟ್ಟಿ ಓದಿಗಿಂತ ಭಿನ್ನವಾದುದು. ಇದಕ್ಕೆ ಪಠ್ಯದ ಅಗತ್ಯವಿಲ್ಲ. ನೆನಪಿನಿಂದ ಹೇಳುವುದಷ್ಟೆ. ಇದಕ್ಕೆ ಬೇಕಾಗಿರುವ ಏಕೈಕ ಸಂಪನ್ಮೂಲ - ಕಥೆ ಹೇಳುವವರು!

ಕಥೆಗಳು ಜನರಿಗೆ ತಮ್ಮ ಜೀವನವನ್ನು ಗ್ರಹಿಸಲು ನೆರವಾಗುತ್ತವೆ. ಹಲವು ಸಾಂಪ್ರದಾಯಿಕ ಕಥೆಗಳು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಲ್ಪಟ್ಟಿವೆ. ಈ ಕಥೆಗಳು ಆಯಾ ಸಮಾಜದ ಮತ್ತು ಸಮುದಾಯದ ನಿಯಮಗಳನ್ನು ಹಾಗೂ ಮೌಲ್ಯಗಳನ್ನು ವಿವರಿಸಲು ನೆರವಾಗುತ್ತವೆ. ಭಾರತವು ತನ್ನ ಬಹುಭಾಷೆ- ಸಂಸ್ಕೃತಿಗಳಿಂದಾಗಿ ಶಕ್ತಿ, ಉತ್ಸಾಹ ತುಂಬಿದ ಮೌಖಿಕ ಜಾನಪದ ಕಥೆಗಳಿಂದ ಶ್ರೀಮಂತವಾಗಿದೆ.

ಕಥೆ ಹೇಳುವುದು ನಿಮ್ಮ ವಿದ್ಯಾರ್ಥಿಗಳ ಭಾಷಾ ಕೌಶಲಗಳ ಬೆಳವಣಿಗೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಕಥೆಗಳು ವಿವೇಕ ಹಾಗೂ ಜ್ಞಾನವನ್ನು ಅವಿಸ್ಮರಣೀಯವಾಗಿ ವರ್ಗಾಯಿಸುವುದು ಮಾತ್ರವಲ್ಲದೇ, ನೈಜ ಮತ್ತು ಸೃಷ್ಟಿತ ಪಾತ್ರಗಳ ಮೂಲಕ ಬೇರೆ ಕಾಲ ಹಾಗೂ ಸ್ಥಳಗಳಿಂದ ಪಡೆದ ವಿಚಾರಗಳಿಂದ ಮಕ್ಕಳಲ್ಲಿ ಕಲ್ಪನಾ ಶಕ್ತಿಯನ್ನು ಬೆಳಸಲು ನೆರವಾಗುತ್ತವೆ.

## 1 ಕಥೆ ಹೇಳುವುದನ್ನು ಏಕೆ ಬಳಸಬೇಕು?

ತರಗತಿಯಲ್ಲಿ ಕಥೆಗಳು ಹೆಚ್ಚು ಶಕ್ತಿಯುತ ಮಾಧ್ಯಮವಾಗಿವೆ. ಅವುಗಳಲ್ಲಿ ಕೆಲವು ತಮಾಷೆಯಾಗಿರುತ್ತದೆ, ಕೆಲವು ಸ್ಫೂರ್ತಿದಾಯಕವಾಗಿರುತ್ತದೆ ಹಾಗೂ ಕೆಲವು ಸವಾಲುಗಳನ್ನು ಮುಂಚೂಣಿಗೆ ತರುತ್ತವೆ. ಕೆಲವು ಕೇಳುಗರನ್ನು ಪ್ರತಿನಿತ್ಯದ ಜೀವನದಿಂದ ಫ್ಯಾಂಟಸಿಯ ಲೋಕಕ್ಕೆ ಕರೆದುಕೊಂಡು ಹೋಗಬಹುದು. ಹೊಸ ಪರಿಕಲ್ಪನೆಗಳ ಬಗ್ಗೆ ಚಿಂತನೆಯನ್ನು ಉತ್ತೇಜಿಸಬಹುದು. ಒಟ್ಟಿನಲ್ಲಿ ಕಲ್ಪನೆ ಮತ್ತು ಭಯರಹಿತ ಸನ್ನಿವೇಶದಲ್ಲಿ ಜನರು ತಮ್ಮ ಸಮಸ್ಯೆಗಳು ಮತ್ತು ಭಾವನೆಗಳನ್ನು ವ್ಯಕ್ತಪಡಿಸಲು ಕಥೆಗಳು ನೆರವಾಗಬಲ್ಲವು.

ಕಥೆಗಳನ್ನು ಗಣಿತ, ವಿಜ್ಞಾನ ಸೇರಿದಂತೆ ಪಠ್ಯಕ್ರಮದ ಎಲ್ಲ ಕ್ಷೇತ್ರಗಳಲ್ಲಿ ವಿಷಯ ವಸ್ತು ಇತರ ಅಂಶಗಳನ್ನು ಪರಿಚಯಿಸಲೂ ಬಳಸಬಹುದಾಗಿದೆ.



**ಚಿಂತನೆಗೊಂದು ಕ್ಷಣ**

ನಿಮ್ಮ ಬಾಲ್ಯವನ್ನು ನೆನಪಿಸಿಕೊಳ್ಳಿ

- ನಿಮಗೆ ಯಾರಾದರೂ ಕಥೆ ಹೇಳುತ್ತಿದ್ದದು ನೆನಪಿದೆಯೇ? ಅವುಗಳನ್ನು ಯಾರು ಹೇಳಿದರು? ನಿಮ್ಮ ತಂದೆ,

ನಿಮ್ಮ ತಾಯಿ, ಅಜ್ಜಿ-ಅಜ್ಜ, ಅಥವಾ ಸೋದರ-ಸೋದರಿಯೇ? ಆ ಕಥೆಗಳಲ್ಲಿ ಯಾವುದಾದರೂ ನೆನಪಿದೆಯೇ? ಅವುಗಳು ವಿಶೇಷವಾಗುವಂತೆ ಮಾಡಿದ್ದು ಏನು?

- ನೀವು ಇತ್ತೀಚೆಗೆ ಯಾರಿಗಾದರೂ ಕಥೆ ಹೇಳಿದ್ದು ಯಾವಾಗ? ಅದು ನಿಮ್ಮ ಅನುಭವದ ಕುರಿತೇ ಅಥವಾ ಒಂದು ಕಾಲ್ಪನಿಕ ಕಥೆಯೇ?

ಕಥೆಗಳು ನಮ್ಮ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅಲ್ಲದೆ, ಸಂದರ್ಭ ಅಧ್ಯಯನ - 1ರಲ್ಲಿ ನೀವು ಓದುವಂತೆ ಅವು ತರಗತಿಯ ಮೌಲ್ಯಯುತ ಸಂಪನ್ಮೂಲವೂ ಆಗಬಲ್ಲವು.

### ಸಂದರ್ಭ ಅಧ್ಯಯನ 1: ಕಥೆ ಹೇಳಲು ಸಿದ್ಧತೆ ಮಾಡಿಕೊಳ್ಳುವುದು

*ಶೇಖರ್ ರವರು ಕರ್ನಾಟಕದ ಕುಶಾಲನಗರದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರು. ಅವರು ಕಥೆ ಹೇಳುವಾಗ ತಮ್ಮ ವಿದ್ಯಾರ್ಥಿಗಳನ್ನು ಹೇಗೆ ತೊಡಗಿಸಿಕೊಳ್ಳುತ್ತಾರೆ ಎಂಬುದನ್ನು ಇಲ್ಲಿ ವಿವರಿಸುತ್ತಾರೆ.*

ನಾನು ಬಹಳ ಚಿಕ್ಕವನಿದ್ದಾಗ, ನನ್ನ ಅಜ್ಜಿ ಪ್ರತಿ ಸಂಜೆ ಕಥೆಗಳನ್ನು ಹೇಳುತ್ತಿದ್ದರು. ಅವುಗಳಿಂದ ನಾನು ಆಕರ್ಷಿತನಾಗಿದ್ದೆ. ಈಗ ನಾನು ಅಜ್ಜಿ ಬಳಸುತ್ತಿದ್ದ ತಂತ್ರಗಳನ್ನೇ ಬಳಸಿಕೊಂಡು ಅವುಗಳಲ್ಲಿ ಕೆಲವು ಕಥೆಗಳನ್ನು ನನ್ನ ಮಕ್ಕಳಿಗೆ ಹೇಳುತ್ತೇನೆ.

ಶಾಲೆಯಲ್ಲಿ ನಾನು ಒಂದರಿಂದ ಮೂರನೇ ತರಗತಿಯ ಮಕ್ಕಳಿಗೆ ಬೋಧನೆ ಮಾಡುತ್ತೇನೆ. ನಾನು ಪ್ರತಿವಾರ ಹೇಳುವ ಕಥೆಗಳನ್ನು ಕೇಳುವುದೆಂದರೆ ಅವರಿಗೆ ಬಹಳ ಇಷ್ಟ. ಕೆಲವು ಶಿಕ್ಷಕರು ತಮ್ಮ ನೆನಪಿನ ಶಕ್ತಿಯಿಂದ ಹೇಳಲು ಕಷ್ಟ ಪಡುತ್ತಾರೆ. ಹಾಗಾಗಿ ಪುಸ್ತಕದಿಂದ ಓದಿ ಹೇಳಲು ಬಯಸುತ್ತಾರೆ. ಬಹುಶಃ ಈ ಕ್ರಮವು ಅವರಿಗೆ ಸುರಕ್ಷಿತವೆನಿಸಿರಬಹುದು. ಕಥೆ ಹೇಳುವುದು ತುಂಬಾ ಉಪಯುಕ್ತವಾಗಿದ್ದು, ಅದಕ್ಕೆ ಅಭ್ಯಾಸ ಮತ್ತು ಆತ್ಮವಿಶ್ವಾಸದ ಅಗತ್ಯವಿದೆ.

ನಾನು ಒಂದು ಹೊಸ ಕಥೆಯನ್ನು ನನ್ನ ಮಕ್ಕಳಿಗೆ ಅಥವಾ ಕಾಲ್ಪನಿಕ ಕೇಳುಗರಿಗೆ ಮೊದಲಿಗೆ ಹೇಳಿ, ಅಭ್ಯಾಸ ಮಾಡಿಕೊಳ್ಳುತ್ತೇನೆ. ಕಥೆಯಲ್ಲಿನ ವಿವರಗಳಿಗೆ ಸಹಜವಾಗಿ ನಿರೂಪಕರ ಧ್ವನಿಯನ್ನು ಹಾಗೂ ಪಾತ್ರಗಳ ವೈವಿಧ್ಯತೆಗಾಗಿ ವಿಭಿನ್ನ ಧ್ವನಿಗಳನ್ನು ಉಪಯೋಗಿಸುತ್ತೇನೆ. ನಿರ್ದಿಷ್ಟ ಅಭಿವ್ಯಕ್ತಿಗಾಗಿ ಉದಾಹರಣೆಗೆ ದುಃಖ, ಆಶ್ಚರ್ಯಗಳನ್ನು ವ್ಯಕ್ತಪಡಿಸಲು ಮುಖಭಾವವನ್ನು ಮತ್ತು ಹಾವಭಾವಕ್ಕೆ ನನ್ನ ಕೈಗಳನ್ನು ಬಳಸುತ್ತೇನೆ.

ನಾನು ಕಥೆಯನ್ನು ಹೇಳುತ್ತಿರುವಾಗಲೇ, ನನ್ನ ವಿದ್ಯಾರ್ಥಿಗಳನ್ನು ಗಮನಿಸಿ ಅವರು ಅರ್ಥ ಮಾಡಿಕೊಳ್ಳುತ್ತಿದ್ದಾರೆಯೇ, ಆಸಕ್ತರಾಗಿದ್ದಾರೆಯೇ ಎಂಬುದನ್ನು ಗುರುತಿಸಬಲ್ಲೆ.



**ಚಿಂತನೆಗೊಂದು ಕ್ಷಣ**

ಶೇಖರ್ ರವರು ತಮ್ಮ ಕಥೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಲು ಯಾವ ತಂತ್ರಗಳನ್ನು ಬಳಸುತ್ತಾರೆ? ನಿಮ್ಮ ಅನಿಸಿಕೆಗಳನ್ನು ನಮ್ಮದರೊಂದಿಗೆ ಹೋಲಿಸಿಕೊಳ್ಳಿ.

- ಅವರು ತಮ್ಮ ಧ್ವನಿಯನ್ನು ವಿಭಿನ್ನ ರೀತಿಯಲ್ಲಿ ಬಳಸುತ್ತಾರೆ.
- ಅವರು ಮುಖ, ಕೈಗಳ ಮೂಲಕ ಹಾವಭಾವ ತೋರುತ್ತಾರೆ.
- ಅವರು ವಿದ್ಯಾರ್ಥಿಗಳ ಪ್ರತಿಕ್ರಿಯೆಗಳನ್ನು ಗಮನಿಸುತ್ತಾರೆ.

"ಕಥೆ ಹೇಳುವುದು, ಹಾಡುಗಳು, ಪಾತ್ರಾಭಿನಯ ಮತ್ತು ನಾಟಕ" ಎಂಬ ಸಂಪನ್ಮೂಲ 1ನ್ನು ಓದಿ.

**Video: Storytelling, songs, role play and drama**
**(ಕಥೆ ಹೇಳುವುದು, ಹಾಡುಗಳು, ಪಾತ್ರಾಭಿನಯ ಮತ್ತು ನಾಟಕ)**

## 2 ತರಗತಿಯಲ್ಲಿ ಕಥೆಗಳನ್ನು ಉಪಯೋಗಿಸುವುದು

ಕಥೆಗಳನ್ನು ಕೇಳುವುದರಿಂದ ಮಕ್ಕಳಿಗೆ ಹೊಸಪದಗಳು, ಪದಗುಚ್ಛಗಳು ಹಾಗೂ ಭಾಷಾ ರಚನೆಯ ಪರಿಚಯವಾಗುತ್ತದೆ. ಆ ಮೂಲಕ ಮಾತು ಮತ್ತು ಬರವಣಿಗೆಯಲ್ಲಿನ ಅವರ ಸಂವಹನ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ. ವಿದ್ಯಾರ್ಥಿಗಳು ಕಥೆಗಳನ್ನು ಕೇಳಿದ ನಂತರ, ಅವರಿಗೆ ಹೇಳಲು ಅವಕಾಶ ನೀಡುವುದರಿಂದ ಅವರ ಭಾಷಾ ಕೌಶಲಗಳು ಉತ್ತಮಗೊಳ್ಳುತ್ತವೆ.



**ಚಿತ್ರ 1.** ತರಗತಿಯಲ್ಲಿ ಕಥೆಗಳನ್ನು ಬಳಸುವುದು

### ಚಟುವಟಿಕೆ 1: ಮೂರು ಕಥೆಗಳು

ಸಂಪನ್ಮೂಲ 2 ರಲ್ಲಿ ಮೂರು ಕಥೆಗಳನ್ನು ಓದಿ. 'ಗುಬ್ಬಚ್ಚಿ ಕಾಳು ತಿಂದ ಕಥೆ', 'ನಾಯಿ ಮತ್ತು ಅದರ ನೆರಳು' ಹಾಗೂ 'ಕರ್ರನೆಯ ಇಲಿ'. ಪ್ರತಿ ಕಥೆಯು ವಿಭಿನ್ನ ವಿಧವನ್ನು ಪ್ರತಿನಿಧಿಸುತ್ತದೆ.

ಇಲ್ಲಿ ಮೂರು ವರ್ಣನೆಗಳನ್ನು ನೀಡಲಾಗಿದೆ. ಅವುಗಳನ್ನು ಪ್ರತಿ ಕಥೆಯ ವಿಧದೊಂದಿಗೆ ಹೊಂದಿಸಬಲ್ಲಿರಾ?

- ಒಂದು ಕಥೆಯಲ್ಲಿ ಪುನರುಚ್ಚರಿಸಬಹುದಾದ ಪದಗುಚ್ಛಗಳಿವೆ ಹಾಗೂ ಅದು ಹಾಸ್ಯಮಯವಾಗಿದೆ. ಭಾಷೆ ಹಾಗೂ ಸಾಕ್ಷರತೆಯ ಬೆಳವಣಿಗೆಗೆ ವಿಶೇಷವಾಗಿ ಸಹಾಯ ಮಾಡುತ್ತದೆ. ಕಥೆ ಹೇಳುವವರು ಬಳಸಬಹುದಾದ ಆಂಗಿಕ ಭಾಷೆಗಳು ಹಾಗೂ ವಿದ್ಯಾರ್ಥಿಗಳು ಪದಗುಚ್ಛಗಳನ್ನು ಮೂಕಾಭಿನಯದೊಂದಿಗೆ ಪುನರುಚ್ಚರಿಸಬಹುದಾದ ಸನ್ನಿವೇಶಗಳಿವೆ.
- ಒಂದು ಕಥೆಯು ಗಟ್ಟಿಯಾದ ನೀತಿ ಸಂದೇಶವನ್ನೊಳಗೊಂಡ ಸಾಂಪ್ರದಾಯಿಕ ಕಥೆಯಾಗಿದೆ.
- ಮತ್ತೊಂದು ಕಥೆಯು ಕೂಡುವುದು, ಕಳೆಯುವುದು, ಸಮ ಮತ್ತು ಬೆಸ ಸಂಖ್ಯೆಯಂತಹ ಗಣಿತದ ಪರಿಕಲ್ಪನೆಗಳನ್ನು ಒಳಗೊಂಡ ಸಾಂಪ್ರದಾಯಿಕ ಕಥೆಯಾಗಿದೆ.

ಒಂದು ಅಥವಾ ಹೆಚ್ಚಿನ ಸಂಖ್ಯೆಯಲ್ಲಿ ಕಥೆಗಳನ್ನು ಆಯ್ಕೆ ಮಾಡಿ. ಅದನ್ನು ನಿಮ್ಮ ಕುಟುಂಬ ಅಥವಾ ಸಹೋದ್ಯೋಗಿಗಳಿಗೆ ಗಟ್ಟಿಯಾಗಿ ಓದಿ ಹೇಳಿ. ನಂತರ ಪಠ್ಯದ ಸಹಾಯವಿಲ್ಲದೆ ನಿಮ್ಮ ಸ್ವಂತ ಮಾತುಗಳಲ್ಲಿ ಹೇಳಲು ಪ್ರಯತ್ನಿಸಿ. ಕಥೆಯ ಭಾಗಗಳನ್ನು ಬದಲಾಯಿಸುವ ಬಗ್ಗೆ ಸ್ವತಂತ್ರರಾಗಿರಿ. ಅದು ಬರವಣಿಗೆಯ ರೂಪದಲ್ಲಿ ಇದ್ದಂತೆಯೇ ಇರಬೇಕಾದ ಅವಶ್ಯಕತೆಯಿಲ್ಲ. ಅಗತ್ಯವಿರುವೆಡೆ ಕಥೆಯೊಂದಿಗೆ ಹಾವಭಾವಗಳನ್ನು ಸೇರಿಸಿ.

ಮುಂದಿನ ಚಟುವಟಿಕೆಯು ತರಗತಿಯಲ್ಲಿ ಕಥೆ ಹೇಳುವ ಅವಧಿಯೊಂದನ್ನು ಯೋಜಿಸುವುದು ಹೇಗೆ ಎಂಬುದನ್ನು ನಿಮಗೆ ತಿಳಿಸಿಕೊಡುತ್ತದೆ. ಚಟುವಟಿಕೆ 1ರಲ್ಲಿ ನೀವು ಓದಿದ ಯಾವುದೇ ಕಥೆಯನ್ನು ನೀವು ಬಳಸಬಹುದು ಅಥವಾ ಹೇಳಲು ನೀವು ಆತ್ಮವಿಶ್ವಾಸ ಹೊಂದಿರುವ ನಿಮಗೆ ಖುಷಿ, ಕೊಡುವ ಕಥೆಯನ್ನು ಆಯ್ಕೆ ಮಾಡಿಕೊಳ್ಳಬಹುದು.

## ಚಟುವಟಿಕೆ 2: ಕಥೆ ಹೇಳುವ ಅವಧಿಯೊಂದನ್ನು ಯೋಜಿಸುವುದು

ನಿಮ್ಮ ತರಗತಿಗೆ ಸೂಕ್ತವಾದ ಕಥೆಯನ್ನು ಆರಿಸಿಕೊಳ್ಳಿ. ಯಾವುದಾದರೂ ಸಾಮಾನ್ಯ ಜಾನಪದ ಕಥೆ, ಪಠ್ಯಪುಸ್ತಕದಿಂದ ಆರಿಸಿದ ಒಂದು ಕಥೆ, ನಿಮಗೆ ಅಥವಾ ಇನ್ನೊಬ್ಬರ ಅನುಭವಕ್ಕೆ ಬಂದ ಆಸಕ್ತಿದಾಯಕ ಘಟನೆಯನ್ನು ಆರಿಸಿಕೊಳ್ಳಬಹುದು.

ಈ ಉದಾಹರಣೆಯಲ್ಲಿ ಸಂಪನ್ಮೂಲ 2ರಲ್ಲಿ ಕೊಟ್ಟಿರುವ 'ಗುಬ್ಬಚ್ಚಿ ಕಾಳು ತಿಂದ ಕಥೆ'ಯನ್ನು ಬಳಸಿಕೊಳ್ಳಲಾಗಿದೆ. ನೀವು ಬೇರೆ ಕಥೆಯನ್ನು ಆರಿಸಿಕೊಂಡು ಯೋಜನೆಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.

- ಕಥೆಯನ್ನು ಚೆನ್ನಾಗಿ ತಿಳಿದುಕೊಂಡು, ಪಠ್ಯವಿಲ್ಲದೆ ಹೇಳುವುದನ್ನು ಅಭ್ಯಾಸ ಮಾಡಿ. ಕಥೆ ಹೇಳುವಾಗ ಪ್ರತಿ ಪಾತ್ರಕ್ಕೂ ವಿಭಿನ್ನವಾದ ಧ್ವನಿ, ಅಭಿವ್ಯಕ್ತಿ ಹಾಗೂ ಆಂಗಿಕ ಚಲನೆಗಳನ್ನು ಬಳಸಿ.
- ಕಥೆಯಲ್ಲಿನ ಪ್ರಮುಖ ಪದಗಳು ಹಾಗೂ ಅಭಿವ್ಯಕ್ತಿಗಳನ್ನು ಗುರುತಿಸಿ (ಉದಾ: ಗುಬ್ಬಚ್ಚಿ, ರಾಗಿಕಾಳು, ಕಣಜ, ತೊಟ್ಟು ನೀರು, ಆಲದ ಮರ) ಪ್ರಮುಖ ಪದಗಳನ್ನು ವರ್ಣಿಸಲು ಚಿತ್ರಗಳನ್ನು ಬಿಡಿಸಿ ಅಥವಾ ವಸ್ತುಗಳನ್ನು ಬಳಸಿ. ನೀವು ಕಥೆ ಹೇಳುವಾಗ ಈ ವಸ್ತುಗಳು ಹಾಗೂ ಚಿತ್ರಗಳು ಕಥೆಯನ್ನು ನೀವು ನೆನಪಿನಲ್ಲಿಟ್ಟುಕೊಳ್ಳಲು ಸಹಾಯವಾಗುತ್ತವೆ.
- ನಿಮ್ಮ ವಿದ್ಯಾರ್ಥಿಗಳನ್ನು ನಿಮ್ಮ ಸುತ್ತಲೂ ಸೇರಿಸಿಕೊಂಡು, ಕೆಲವು ಪ್ರಾರಂಭದ ಪ್ರಶ್ನೆಗಳನ್ನು ಕೇಳಿ. ಉದಾಹರಣೆಗೆ:
    - ಕಣಜ ಅಂದರೆ ಏನೆಂದು ಗೊತ್ತಾ?
    - ಕಣಜ ನೋಡಲು ಹೇಗಿರುತ್ತೇ?
    - ಕಣಜದಲ್ಲಿ ಏನೇನು ಇಡುತ್ತಾರೆ?
    - ಕಣಜದಲ್ಲಿರೋದನ್ನ ತಿನ್ನಲು ಏನೇನು ಬರುತ್ತೆ?
- ನಿಮ್ಮ ಪ್ರಶ್ನೆಗಳು, ಹೊಸಪದಗಳು ಅಥವಾ ಅಭಿವ್ಯಕ್ತಿಗಳು ವಿದ್ಯಾರ್ಥಿಗಳಿಗೆ ಅರ್ಥವಾಗಲು ಅವರ ಮನೆಭಾಷೆಗಳನ್ನು ಉಪಯೋಗಿಸಿ.
- ನೀವು ಕಥೆ ಹೇಳಲು ಹೊರಟಿರುವುದು ಕಥೆಗಳನ್ನು ಬಹಳವಾಗಿ ಇಷ್ಟಪಟ್ಟ ರಾಜನ ಕಥೆ ಎಂಬುದನ್ನು ಹಾವಭಾವದ ಅಭಿವ್ಯಕ್ತಿಯೊಂದಿಗೆ ತಿಳಿಸಿ.
- ವಿಭಿನ್ನ ಪಾತ್ರಗಳಿಗೆ ಸೂಕ್ತವಾದ ಧ್ವನಿಗಳು, ಆಂಗಿಕ ಚಲನೆ, ಸರಿ ಹೊಂದುವ ಚಿತ್ರಗಳು, ವಸ್ತುಗಳನ್ನು ತೋರಿಸುವ ಮೂಲಕ ಕಥೆಯನ್ನು ಹೇಳಿ.
- ಕಥೆ ಹೇಳುವುದನ್ನು ಆಗಾಗ್ಗೆ ನಿಲ್ಲಿಸಿ, ಪ್ರಶ್ನೆ ಕೇಳಿ ಉದಾಹರಣೆಗೆ:
    - ಈಗ ರಾಜನಿಗೆ ಏನನ್ನಿಸಿತು?
- ಇಡೀ ತರಗತಿಯೊಂದಿಗೆ ಕಥೆಯ ಕೊನೆ ಭಾಗವನ್ನು ಚರ್ಚಿಸಿ, ಕೆಲವು ಪ್ರಶ್ನೆಗಳನ್ನು ಕೇಳಿ. ಉದಾ:
    - ರಾಜನಿಗೆ ಏಕೆ ಬೇಜಾರಾಯಿತು?
    - ಕಥೆಗಾರನ ಸ್ನೇಹಿತನಿಗೆ ಏಕೆ ಸಂತೋಷವಾಯಿತು?
    - ರಾಜ ಅಮೇಲೆ ಏನು ಮಾಡಿದ?
- ಕಥೆ ಹೇಳುವ ಅವಧಿ ಹೇಗೆ ಮುಂದುವರೆಯಿತೆಂಬುದನ್ನು ಟಿಪ್ಪಣಿ ತಯಾರಿಸುವುದರೊಂದಿಗೆ ಚಿಂತನೆ ಮಾಡಿ. ಯಾವುದು ಉತ್ತಮವಾಗಿತ್ತು? ಮುಂದಿನ ಬಾರಿಗೆ ಯಾವುದನ್ನು ಸುಧಾರಣೆ ಮಾಡಬೇಕು? ಎಲ್ಲ ವಿದ್ಯಾರ್ಥಿಗಳೂ ತೊಡಗಿಕೊಂಡಿದ್ದರೇ? ಯಾರಾದರೂ ಅರ್ಥವಾಗದಂತೆ ಕಂಡಿದ್ದರೆ, ಕಾರಣವೇನಿರಬಹುದು? ಕಥೆಯ ಬಗ್ಗೆ ಮಾತನಾಡಲು ಹಾಗೂ ಪ್ರತಿಕ್ರಿಯಿಸಲು ಎಲ್ಲರಿಗೂ ಅವಕಾಶ ದೊರೆಯಿತೇ?

ತರಗತಿ ಅವಧಿಯನ್ನು ಈ ರೀತಿಯಾಗಿ ಮೌಲ್ಯಮಾಪನ ಮಾಡುವುದರಿಂದ ನಿಮ್ಮ ವಿದ್ಯಾರ್ಥಿಗಳಲ್ಲಿ ಬೆಳೆಯುತ್ತಿರುವ ಭಾಷೆ ಮತ್ತು ಸಾಕ್ಷರತೆಯ ಕೌಶಲಗಳ ಕುರಿತು ತಿಳಿಯುವುದರ ಜೊತೆಗೆ ನಿಮ್ಮ ಕಥೆ ಹೇಳುವ ತಂತ್ರಗಳನ್ನು ಉತ್ತಮಪಡಿಸಿಕೊಳ್ಳಲು ಸಹಾಯವಾಗುತ್ತದೆ.

- ನಿಮ್ಮ ಎಲ್ಲ ವಿದ್ಯಾರ್ಥಿಗಳೊಂದಿಗೆ - ಅವರು ನಿಮ್ಮ ಹತ್ತಿರದಲ್ಲಿ ಕುಳಿತಿರಲಿ ಅಥವಾ ಸಾಕಷ್ಟು ದೂರದಲ್ಲಿರಲಿ - ಕಥೆ ಹೇಳುವಾಗ, ಎಲ್ಲರೊಂದಿಗೆ ನಿಮ್ಮ ಕಣ್ಣೋಟ ಸಂಪರ್ಕ ಆಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಿ.

ಕಥೆ ಹೇಳುವಿಕೆಯು ಆಲಿಸುವಿಕೆಗಿಂತ ಮಿಗಿಲಾದ ಹಲವಾರು ಚಟುವಟಿಕೆಗಳಿಗೆ ದಾರಿ ಮಾಡಿಕೊಡುತ್ತದೆ.
ಉದಾಹರಣೆ: ಕಥೆಯಲ್ಲಿ ವರ್ಣಿಸಲಾದ ಬಣ್ಣಗಳು ಅಥವಾ ಸಂಖ್ಯೆಗಳನ್ನು ಬರೆಯುವುದು, ಗುಂಪುಗಳಲ್ಲಿ ವರ್ಣನೆ ಮಾಡುವುದು, ಕಥೆಯ ಮುಕ್ತಾಯವನ್ನು ಬದಲಿಸುವುದು, ಎರಡು ಪಾತ್ರಗಳನ್ನು ಹೋಲಿಸುವುದು.
ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡಿ, ಚಿತ್ರಗಳು, ವಸ್ತುಗಳನ್ನು ಕೊಟ್ಟು, ಬೇರೆ ದೃಷ್ಟಿಕೋನದಿಂದ ಅದೇ ಕಥೆಯನ್ನು ಹೇಳಿಸಬಹುದು.
ಹಿರಿಯ ವಿದ್ಯಾರ್ಥಿಗಳಿಗೆ ಸಂಕೀರ್ಣ ಕಥೆಯೊಂದನ್ನು ವಿಶ್ಲೇಷಿಸಲು ಅವಕಾಶ ಕೊಡಬಹುದು. ಒಂದು ನಿರ್ದಿಷ್ಟ ವಿದ್ಯಮಾನಕ್ಕೆ ವೈಜ್ಞಾನಿಕ ವಿವರಣೆಗಳನ್ನು ಚರ್ಚಿಸುವುದು, ಕಲ್ಪಿತ ಕಥೆಯಿಂದ ಸತ್ಯಾಂಶವನ್ನು ಬೇರ್ಪಡಿಸುವುದು ಅಥವಾ ಸರಿ ಹೊಂದುವ ಗಣಿತೀಯ ಸಮಸ್ಯೆಗಳನ್ನು ಬಿಡಿಸುವ ಕಾರ್ಯಗಳನ್ನು ಕೊಡಬಹುದು.

## 3 ಸಮುದಾಯ ಕಥೆಗಳನ್ನು ಸಂಗ್ರಹಿಸುವುದು:

ಕಥೆ ಹೇಳುವುದು ಒಂದು ಹಂಚಿಕೊಳ್ಳುವ ಚಟುವಟಿಕೆಯಾಗಿದ್ದು, ಇದು ಕುಟುಂಬ ಅಥವಾ ಸಮುದಾಯವನ್ನು ಒಟ್ಟಾಗಿ ಬೆಸೆಯಬಲ್ಲದು, ಇತಿಹಾಸಗಳನ್ನು ನೆನಪಿಸಬಲ್ಲದು, ಭಾಷೆಗಳು ಹಾಗೂ ಸಂಸ್ಕೃತಿಗಳನ್ನು ಕಾಪಾಡಬಲ್ಲದು. ಸಮುದಾಯದ ಹಿರಿಯ ಸದಸ್ಯರು ನೆನಪಿನಲ್ಲಿಟ್ಟುಕೊಂಡಿರುವ ಹಲವಾರು ಕಥೆಗಳಿವೆ,. ಈ ಕಥೆಗಳ ಸಂಗ್ರಹಿಸುವಿಕೆಯ ಮೂಲಕ ಶಾಲಾ ಜೀವನದಲ್ಲಿ ನಿಮ್ಮ ವಿದ್ಯಾರ್ಥಿಗಳು, ಅವರ ಕುಟುಂಬ ಹಾಗೂ ಸಮುದಾಯವನ್ನು ತೊಡಗಿಸಿಕೊಳ್ಳುವ ರೋಚಕ ವಿಧಾನವಾಗುವ ಸಾಧ್ಯತೆಯನ್ನು ಹೊಂದಿದೆ.



**ಚಿತ್ರ 3 ಸಮುದಾಯ ಕಥೆಗಳು ಬೋಧನೆಗೆ ಒಂದು ಉಪಯುಕ್ತ ಸಂಪನ್ಮೂಲ**

## ಸಂದರ್ಭ ಅಧ್ಯಯನ 2: ಸ್ಥಳೀಯ ಕಥೆಗಳನ್ನು ಸಂಗ್ರಹಿಸುವುದು

*ಸುಜಾತ ರವರು ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದಾರೆ. ಅವರು ವಿದ್ಯಾರ್ಥಿಗಳನ್ನು ತಮ್ಮ ಸಮುದಾಯದ ಕಥೆಗಳನ್ನು ಹಂಚಿಕೊಳ್ಳಲು ಹೇಗೆ ಪ್ರೋತ್ಸಾಹಿಸುತ್ತಾರೆಂಬುದನ್ನು ಇಲ್ಲಿ ವಿವರಿಸಿದ್ದಾರೆ.*

ನಾನು ನನ್ನ ವಿದ್ಯಾರ್ಥಿಗಳಿಗೆ, ಅವರ ಕುಟುಂಬ ಅಥವಾ ನೆರೆಹೊರೆಯವರಿಂದ ಒಂದು ಕಥೆಯನ್ನು ತಿಳಿದುಕೊಂಡು ಬರಲು ಹೇಳುತ್ತೇನೆ. ಕಥೆಯನ್ನು ಸಂಗ್ರಹಿಸಿ, ತಿಳಿದುಕೊಳ್ಳಲು ಅವರಿಗೆ ಒಂದು ವಾರದ ಅವಕಾಶ ಕೊಡುತ್ತೇನೆ. ನಂತರ ದಿನಕ್ಕೆ ಒಬ್ಬಿಬ್ಬರು ವಿದ್ಯಾರ್ಥಿಗಳಿಗೆ ಬೇರೆ ಬೇರೆ ಧ್ವನಿಗಳು, ಹಾವಭಾವಗಳು ಹಾಗೂ ಅಭಿನಯದೊಂದಿಗೆ ಇಡೀ ತರಗತಿಗೆ ತಾವು ಸಂಗ್ರಹಿಸಿದ ಕಥೆಯನ್ನು ಹೇಳಲು ಅವಕಾಶ ನೀಡುತ್ತೇನೆ.

ಮೊದಲ ಬಾರಿ ನಾನು ಈ ರೀತಿ ಮಾಡಿದಾಗ ವಿದ್ಯಾರ್ಥಿಗಳು ಕಥೆಗಳನ್ನು ಕನ್ನಡದಲ್ಲಿ ಹೇಳಿದರು. ನಂತರ ನಾನು ತುಳು, ಕೊಂಕಣಿ, ಹವ್ಯಕ ಹಾಗೂ ಉರ್ದು ಮೊದಲಾದ ಸ್ಥಳೀಯ ಭಾಷೆಗಳಲ್ಲಿನ ಕಥೆಗಳನ್ನು ಸೇರಿಸಲು ತೀರ್ಮಾನಿಸಿದೆ. ಈ ಭಾಷೆಗಳನ್ನು ಮಾತನಾಡುವ ವಿದ್ಯಾರ್ಥಿಗಳಿಗೆ ಕಥೆಯನ್ನು ಸಂಗ್ರಹಿಸಲು ಹಾಗೂ ತರಗತಿಯಲ್ಲಿ ಹೇಳಲು ತಿಳಿಸಿದೆ. ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳ ಸಹಾಯದಿಂದ ಕಥೆಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು.

ಇಡೀ ತರಗತಿಯ ಮಕ್ಕಳಿಗೆ ಅವರು ಕೇಳಿದ ಕಥೆಯಲ್ಲಿನ ಪ್ರಮುಖ ಪಾತ್ರಗಳು ಹಾಗೂ ಘಟನೆಗಳನ್ನು ಹೊರಹೊಮ್ಮಿಸುವ ಚಿತ್ರಗಳನ್ನು ಬಿಡಿಸುವಂತೆ ತಿಳಿಸಿದೆ.

ತಮ್ಮ ಸಮುದಾಯಗಳಿಂದ ಕಥೆಗಳನ್ನು ಸಹಪಾಠಿಗಳೊಂದಿಗೆ ಹಂಚಿಕೊಳ್ಳುವುದರಿಂದ ಈ ಚಟುವಟಿಕೆಯು ತರಗತಿಯಲ್ಲಿ ನನ್ನ ವಿದ್ಯಾರ್ಥಿಗಳನ್ನು ಪರಸ್ಪರ ಬೆಸೆಯಲು ಸಹಾಯ ಮಾಡಿತು.

**ಚಿಂತನೆಗೊಂದು ಕ್ಷಣ**

- ವಿದ್ಯಾರ್ಥಿಗಳನ್ನು ಅವರ ಮನೆಭಾಷೆಯಲ್ಲಿ ಕಥೆ ಹೇಳುವಂತೆ ಪ್ರೋತ್ಸಾಹಿಸುವುದರ ಮಹತ್ವವೇನು?
- ತಾವು ಸಂಗ್ರಹಿಸಿದ ಕಥೆಗಳನ್ನು ಸಹಪಾಠಿಗಳಿಗೆ ಹೇಳಲು ಸಂಕೋಚಪಡುವ ವಿದ್ಯಾರ್ಥಿಗಳಿಗೆ ಹೇಗೆ ಸಹಾಯ ಮಾಡಬಹುದು?
- ವಿದ್ಯಾರ್ಥಿಗಳು ಸಂಗ್ರಹಿಸುವ ಕಥೆಗಳಿಗೆ ಬೇರೆ ಯಾವ ಚಟುವಟಿಕೆಗಳನ್ನು ನಡೆಸಲು ಯೋಚಿಸುವಿರಿ?

ಸಮುದಾಯದಿಂದ ಕಥೆ, ಹಾಡು, ಕವನ ಅಥವಾ ಮೌಖಿಕವಾಗಿ ವರ್ಗಾವಣೆಯಾಗುತ್ತಿರುವ ಇತರ ಸಂಪ್ರದಾಯಗಳನ್ನು ಸಂಗ್ರಹಿಸುವ ಕ್ರಿಯೆ ಶಾಲೆ, ವಿದ್ಯಾರ್ಥಿಗಳ ಕುಟುಂಬಗಳು ಹಾಗೂ ಇತರ ಸ್ಥಳೀಯ ಜನರೊಂದಿಗೆ ಧನಾತ್ಮಕ ಕೊಂಡಿಗಳನ್ನು ಸೃಷ್ಟಿಸುತ್ತದೆ. ಈ ಚಟುವಟಿಕೆಯು ವಿದ್ಯಾರ್ಥಿಗಳನ್ನು ಆಲೋಚನಾ ಪೂರ್ಣರಾಗಿ ಪ್ರಶ್ನಿಸಲು ಹಾಗೂ ಅವರ ಸ್ಥಳೀಯ ಸಂಸ್ಕೃತಿ ಹಾಗೂ ಇತಿಹಾಸದ ವಿವರಗಳನ್ನು ಗಮನವಿಟ್ಟು ಆಲಿಸಲು ಸಮರ್ಥರನ್ನಾಗಿಸುತ್ತದೆ. ಈ ಕಥೆಗಳನ್ನು ವಿದ್ಯಾರ್ಥಿಗಳು ಅವರ ಮನೆ ಭಾಷೆಗಳಲ್ಲಿ ಪುನಃ ಹೇಳುವಂತೆ ಪ್ರೋತ್ಸಾಹಿಸುವುದರಿಂದ ಸ್ಥಳೀಯ ಪರಿಸರದಲ್ಲಿ ಆಯಾ ಭಾಷೆಗಳ ಮೌಲ್ಯವನ್ನು ಗುರುತಿಸಿದಂತಾಗುತ್ತದೆ. ಈ ಕ್ರಮದಿಂದಾಗಿ ವಿದ್ಯಾರ್ಥಿಗಳು ತಮ್ಮ ಕನ್ನಡ ಭಾಷೆಯನ್ನು ಬೆಳೆಸಿಕೊಳ್ಳುವುದಕ್ಕಾಗಿ ಸ್ಥಳೀಯ ಭಾಷೆಗಳನ್ನು ಬಳಸಲು ಅವಕಾಶವಾಗುತ್ತದೆ.

ಕೆಲವು ವಿದ್ಯಾರ್ಥಿಗಳು ತಾವು ಸಂಗ್ರಹಿಸಿದ ಕಥೆಗಳನ್ನು ಹೇಳಲು ಸಂಕೋಚ ಪಟ್ಟರೆ, ಪಾಠದ ನಂತರ ಅವರು ನಿಮ್ಮ ಬಳಿ ಹೇಳುವಂತೆ ತಿಳಿಸಬಹುದು. ಇದರಿಂದಾಗಿ ಅವರಿಗೆ ತಮ್ಮ ಸಹಪಾಠಿಗಳ ಎದುರು ಹೇಳುವ ಬದಲು, ಒಂದು ಸುಭದ್ರ ಹಾಗೂ ಖಾಸಗಿ ವಾತಾವರಣದಲ್ಲಿ ಹೇಳಲು ಪ್ರಯತ್ನಿಸುವ ಅವಕಾಶ ಒದಗುತ್ತದೆ. ಇಂತಹ ವಿದ್ಯಾರ್ಥಿಗಳನ್ನು ಅವರ ಆತ್ಮವಿಶ್ವಾಸ ಹೆಚ್ಚಿಸುವುದಕ್ಕಾಗಿ ಪ್ರಶಂಸಿಸಿ ಹಾಗೂ ಪ್ರೋತ್ಸಾಹಿಸಿ. ತರಗತಿಯಲ್ಲಿ ಅವರನ್ನು ಅವರ ಸ್ನೇಹಿತರೊಂದಿಗೆ ಅಥವಾ ಅವರ ಮನೆ ಭಾಷೆಯನ್ನು ಮಾತನಾಡುವವರೊಂದಿಗೆ ಜೊತೆ ಮಾಡಲು ನೀವು ಪ್ರಯತ್ನಿಸಬಹುದು.

ತರಗತಿಯಲ್ಲಿ ಭಾಗವಹಿಸುವಿಕೆ ಹಾಗೂ ಒಳಗೊಳ್ಳುವಿಕೆಯ ತತ್ವಗಳನ್ನು ಕುರಿತು ಹೆಚ್ಚಿನ ವಿಷಯವನ್ನು ತಿಳಿಯಲು 'Involving all' ಪ್ರಮುಖ ಸಂಪನ್ಮೂಲಗಳನ್ನು ಓದಿ.



### ವಿಡಿಯೋ: ಎಲ್ಲರನ್ನೂ ಒಳಗೊಳ್ಳುವುದು Involving all

ವಿದ್ಯಾರ್ಥಿಗಳ ಕಥೆಗಳನ್ನು ಅನುಪಾಲನೆ ಮಾಡುವ ಕ್ರಮಗಳನ್ನು ಕುರಿತು ಹೆಚ್ಚಿನ ಹೊಳಹುಗಳಿಗಾಗಿ ಚಟುವಟಿಕೆ 3ನ್ನು ನೋಡಿ.

### ಚಟುವಟಿಕೆ 3: ಸಮುದಾಯದಿಂದ ಕಥೆಗಳನ್ನು ಸಂಗ್ರಹಿಸುವುದು

ವಿದ್ಯಾರ್ಥಿಗಳು ಕಥೆ ಸಂಗ್ರಹಣೆಗೆ ತೊಡಗಿಕೊಳ್ಳಲು ಸಾಕಷ್ಟು ಸಮಯಾವಕಾಶ, ಸೂಕ್ಷ್ಮವಾಗಿ ಹಾಗೂ ಜಾಗರೂಕತೆಯಿಂದ ತಯಾರಿಸಿದ ಯೋಜನೆ ಬೇಕಾಗುತ್ತದೆ.

- ಸಂದರ್ಭ ಅಧ್ಯಯನ 2ನ್ನು ಮಾರ್ಗದರ್ಶಿಯಾಗಿಟ್ಟುಕೊಂಡು, ನಿಮ್ಮ ವಿದ್ಯಾರ್ಥಿಗಳಿಂದ ಅವರ ಕುಟುಂಬದ ಸದಸ್ಯರಿಗೆ ಕಥೆಗಳು, ಹಾಡುಗಳು ಹಾಗೂ ಕವನಗಳು ಪರಿಚಯವಿರುವ ಬಗ್ಗೆ ತಿಳಿಯಿರಿ. ಈ ಕಥೆಗಳು, ಹಾಡುಗಳು ಅಥವಾ ಕವನಗಳನ್ನು ಅವರ ಮನೆ ಭಾಷೆ ಅಥವಾ ಕನ್ನಡದಲ್ಲಿ ಕಲಿಯಲು ಪ್ರೋತ್ಸಾಹಿಸಿ. ವಿದ್ಯಾರ್ಥಿಗಳು ಬಯಸಿದಲ್ಲಿ ತಮ್ಮ ಧ್ವನಿ, ಹಾವಭಾವ ಹಾಗೂ ಅಭಿನಯದೊಂದಿಗೆ ಕಥೆಗಳನ್ನು ಕಲಿಯಲು ಪ್ರೋತ್ಸಾಹಿಸಿ.
- ಒಬ್ಬ ವಿದ್ಯಾರ್ಥಿ ಸರದಿಯಲ್ಲಿ, ಪ್ರತಿದಿನ ಅಥವಾ ವಾರಕ್ಕೊಮ್ಮೆ ಕಥೆ ಹೇಳಲು ವಿಶೇಷವಾದ ಸಮಯವನ್ನು ಮೀಸಲಿಡಿ.
- ಇಡೀ ತರಗತಿಗೆ ಕಥೆ ಹೇಳುವ ಮೊದಲು ಸಣ್ಣ ಗುಂಪಿಗೆ ಅಥವಾ ಜೊತೆಗಾರರಿಗೆ ಕಥೆ ಹೇಳಲು ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸಿ.
- ಒಂದು ಉತ್ತಮ ಹಾಗೂ ಪ್ರಶಂಸನೀಯ ಕೇಳುಗರಾಗುವುದು ಹೇಗೆ ಎಂಬುದಕ್ಕೆ ಮಾದರಿಯಾಗಿ, ಕಥೆ ಹೇಳಲು ನಿಮ್ಮ ವಿದ್ಯಾರ್ಥಿಗಳು ಮಾಡುವ ಪ್ರಯತ್ನಗಳಿಗೆ ಧನಾತ್ಮಕವಾಗಿ ಪ್ರತಿಕ್ರಿಯಿಸಿ ಹಾಗೂ ಅವರ ಸಹಪಾಠಿಗಳಿಗೂ ಸಹ ಧನಾತ್ಮಕವಾಗಿ ಪ್ರತಿಕ್ರಿಯಿಸುವಂತೆ ಪ್ರೋತ್ಸಾಹಿಸಿ.
- ಕಥೆಯು ಸ್ಥಳೀಯ ಭಾಷೆಯಲ್ಲಿದ್ದರೆ, ಕಥೆಯಲ್ಲಿನ ಪ್ರಮುಖ ಪದಗಳನ್ನು ಗಮನದಲ್ಲಿಟ್ಟುಕೊಂಡು ಕನ್ನಡಕ್ಕೆ ಭಾಷಾಂತರಿಸುವ ಚರ್ಚೆಗೆ ಅವಕಾಶ ಕೊಡಿ.
- ನಿಮ್ಮ ವಿದ್ಯಾರ್ಥಿಗಳಿಗೆ ಬೇರೆ ತರಗತಿಗಳಲ್ಲಿ, ಪ್ರಾರ್ಥನಾ ಸಮಯದಲ್ಲಿ ಅಥವಾ ಸ್ಥಳೀಯ ಸಮಾರಂಭದಲ್ಲಿ ತಮ್ಮ ಕಥೆಗಳನ್ನು ಹೇಳುವುದಕ್ಕಾಗಿ ಅವಕಾಶ ಮಾಡಿಕೊಡಿ.
- ನಿಮ್ಮ ವಿದ್ಯಾರ್ಥಿಗಳಿಗೆ ತಾವು ರಚಿಸಿದ ಕಥೆಗಳನ್ನು, ಅದರೊಂದಿಗೆ ಚಿತ್ರಗಳನ್ನು ಸೇರಿಸಿ, ತಮ್ಮ ಪುಸ್ತಕಗಳಲ್ಲಿ ಬರೆಯಲು ತಿಳಿಸಿ.

## 4 ಸಾರಾಂಶ

ಭಾಷೆ ಹಾಗೂ ಸಾಕ್ಷರತೆಯ ತರಗತಿಯಲ್ಲಿ ಕಥೆ ಹೇಳುವುದರ ಹಲವಾರು ವಿಧಾನಗಳ ಬಳಕೆಯನ್ನು ಕುರಿತು ಈ ಘಟಕವು ವಿವರಿಸಿದೆ. ನಿಮ್ಮ ವಿದ್ಯಾರ್ಥಿಗಳ ವಯಸ್ಸು ಹಾಗೂ ಆಸಕ್ತಿಗಳಿಗೆ ಅನುಗುಣವಾದ ಸೂಕ್ತ ಕಥೆ ಹೇಳುವ ಅವಧಿಗಳನ್ನು ಅನುಸರಿಸಲು ಹಲವಾರು ಕ್ರಮಗಳ ರೂಪುರೇಷೆಯನ್ನು ಒದಗಿಸಿದೆ. ವಿದ್ಯಾರ್ಥಿಗಳು ಕಥಾ ಸಂಗ್ರಹದಲ್ಲಿ ತೊಡಗಿಕೊಂಡು, ತಾವು ಸಂಗ್ರಹಿಸಿದ ಕಥೆಗಳನ್ನು ತಮ್ಮ ಮನೆ ಭಾಷೆಯಲ್ಲಿ ಸಹಪಾಠಿಗಳಿಗೆ ಹೇಳಬಹುದಾದ ವಿಧಾನಗಳು ತನ್ಮೂಲಕ ಶಾಲೆ ಹಾಗೂ ಸಮುದಾಯದ ನಡುವೆ ಗಟ್ಟಿಯಾದ ಕೊಂಡಿಗಳನ್ನು ಬೆಳೆಸಲು ಮಾರ್ಗಗಳನ್ನು ಸೂಚಿಸಿದೆ. ಇದರಿಂದ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ತಮ್ಮ ಮನೆ ಭಾಷೆ ಹಾಗೂ ಸಂಸ್ಕೃತಿಗೆ ಗೌರವ ದೊರಕುತ್ತಿದೆ ಎಂಬ ಭಾವನೆ ಉಂಟಾಗುತ್ತದೆ ಹಾಗೂ ತಮ್ಮ ಕನ್ನಡ ಭಾಷಾ ಬೆಳವಣಿಗೆಗಾಗಿ, ಈ ಭಾಷೆಗಳಲ್ಲಿ ತಮ್ಮ ಕೌಶಲಗಳನ್ನು ಬೆಳೆಸಿಕೊಳ್ಳಲು ಅವಕಾಶ ನೀಡುತ್ತದೆ. ವಿದ್ಯಾರ್ಥಿಗಳು ಕಥೆಗಳನ್ನು ಕೇಳುವುದು ಹಾಗೂ ಹೇಳುವುದನ್ನು ಆನಂದಿಸುತ್ತಾರೆ. ನಿಮ್ಮ ಪಾಠಗಳಲ್ಲಿ ಕಥೆ ಹೇಳುವಿಕೆಯ ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಮಾರ್ಗಗಳನ್ನು ಹುಡುಕಿ, ಏಕೆಂದರೆ ಕಥೆಗಳು ಯಾವುದೇ ವಿಷಯ ಕ್ಷೇತ್ರದ ಕಲಿಕೆಗೆ ಅಮೂಲ್ಯವಾಗಿವೆ.

# ಸಂಪನ್ಮೂಲಗಳು

## ಸಂಪನ್ಮೂಲ 1: ಕಥೆ ಹೇಳುವುದು, ಹಾಡುಗಳು, ಪಾತ್ರಾಭಿನಯ ಮತ್ತು ನಾಟಕ

ಕಲಿಕಾ ಅನುಭವದಲ್ಲಿ ಸಕ್ರಿಯವಾಗಿ ತೊಡಗಿಕೊಂಡಾಗಲೇ ಮಕ್ಕಳು ಉತ್ತಮವಾಗಿ ಕಲಿಯುವುದು. ಪರಸ್ಪರ ಒಡನಾಟ ಮತ್ತು ತಮ್ಮ ಐಡಿಯಾಗಳನ್ನು ಹಂಚಿಕೊಳ್ಳುವುದರ ಮೂಲಕ ನಿಮ್ಮ ವಿದ್ಯಾರ್ಥಿಗಳು ತಾವು ಅರ್ಥ ಮಾಡಿಕೊಂಡಿರುವುದನ್ನು ಇನ್ನೂ ಆಳವಾಗಿ ಗ್ರಹಿಸುವ ಸಾಧ್ಯತೆ ಇರುತ್ತದೆ.  ಪಠ್ಯಕ್ರಮದ ಹರವಿನುದ್ದಕ್ಕೂ, ಗಣಿತ ಮತ್ತು ವಿಜ್ಞಾನಗಳನ್ನೂ ಒಳಗೊಂಡಂತೆ, ಅನೇಕ ವಿಷಯಗಳಿಗೆ ಕಥೆ ಹೇಳುವುದು, ಹಾಡುಗಳು, ಪಾತ್ರಾಭಿನಯ ಮತ್ತು ನಾಟಕವನ್ನು ಬಳಸಬಹುದು.

### ಕಥೆ ಹೇಳುವುದು

ಕಥೆಗಳು ಜೀವನವನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತವೆ.  ಅನೇಕ ಸಾಂಪ್ರದಾಯಿಕ ಕಥೆಗಳು ಪೀಳಿಗೆಯಿಂದ ಪೀಳಿಗೆಗೆ ವರ್ಗಾವಣೆಯಾಗಿವೆ. ನಾವು ಚಿಕ್ಕವರಾಗಿದ್ದಾಗ ನಮಗೆ ಈ ಕಥೆಗಳನ್ನು ಹೇಳಿ, ಅವುಗಳ ಮೂಲಕ ನಮ್ಮ ಸಮಾಜದ ನಿಯಮ ಮತ್ತು ಮೌಲ್ಯಗಳನ್ನು ತಿಳಿಸಿಕೊಟ್ಟಿದ್ದರು.

ತರಗತಿಯಲ್ಲಿ ಕಥೆಗಳನ್ನು ಪ್ರಭಾವಶಾಲೀ ಮಾಧ್ಯಮವಾಗಿ ಬಳಸಬಹುದು. ಕಥೆಗಳು:

- ಮನೋರಂಜಕವಾಗಿರುತ್ತವೆ, ರೋಚಕವಾಗಿರುತ್ತವೆ ಮತ್ತು ಉದ್ದೀಪಿಸುತ್ತವೆ.
- ನಮ್ಮ ದೈನಂದಿನ ಜೀವನದಿಂದ ಕಲ್ಪನಾ ಪ್ರಪಂಚಕ್ಕೆ ಕರೆದೊಯ್ಯುತ್ತವೆ.
- ನಮಗೆ ಸವಾಲುಗಳನ್ನೊಡುತ್ತವೆ.
- ಹೊಸ ಐಡಿಯಾಗಳ ಕುರಿತು ಚಿಂತಿಸಲು ಎಡೆ ಮಾಡಿಕೊಡುತ್ತವೆ.
- ನಮ್ಮ ಭಾವನೆಗಳ ಒಳಹೊಕ್ಕು ಪರಿಶೋಧನೆಯಲ್ಲಿ ತೊಡಗಿಸುತ್ತವೆ.
- ವಾಸ್ತವತೆಯಿಂದ ಹೊರತಾದ ಸನ್ನಿವೇಶದಲ್ಲಿ, ಸಮಸ್ಯೆಯ ಬಗ್ಗೆ ಕೂಲಂಕುಷವಾಗಿ ಚಿಂತಿಸುವ ಅವಕಾಶವಿರುವುದರಿಂದ, ಅವುಗಳ ಬಗ್ಗೆ ಭಯ ಬೀಳದೇ ಚಿಂತಿಸಲು ಅನುಕೂಲಕರ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಕಥೆ ಹೇಳುವಾಗ ಮಕ್ಕಳ ಕಣ್ಣಲ್ಲಿ ಕಣ್ಣಿಟ್ಟು ನೋಡಿ. ಬೇರೆ ಬೇರೆ ಪಾತ್ರಗಳಿಗೆ, ಆ ಪಾತ್ರಗಳಿಗೆ ತಕ್ಕ ಉಚ್ಚಾರಣೆ, ಧ್ವನಿಯಲ್ಲಿ ಏರಿಳಿತವಿದ್ದರೆ, ಉದಾಹರಣೆಗೆ ಸಂದರ್ಭಾನುಸಾರ ಪಿಸುಗುಟ್ಟಿದರೆ ಅಥವಾ ಜೋರಾಗಿ ಕಿರುಚಿದರೆ ಮಕ್ಕಳು ಸಂತೋಷ ಪಡುತ್ತಾರೆ. ಕಥೆಯಲ್ಲಿ ನಡೆಯುವ ಮುಖ್ಯ ಘಟನೆಗಳನ್ನು ಪುಸ್ತಕದ ಸಹಾಯವಿಲ್ಲದೇ ಮೌಖಿಕವಾಗಿ ನಿಮ್ಮದೇ ವಾಕ್ಯಗಳಲ್ಲಿ ಹೇಳಲು ಅಭ್ಯಾಸ ಮಾಡಿಕೊಳ್ಳಿ.

ಹೇಳುತ್ತಿರುವ ಕಥೆಗೆ ಜೀವ ತುಂಬಲು, ಕಥೆಗೆ ಸಂಬಂಧಿಸಿದ ಕೆಲವು ವಸ್ತು ಅಥವಾ ವಸ್ತ್ರಗಳನ್ನು ಬಳಸಬಹುದು. ಕಥೆಯನ್ನು ಪರಿಚಯಿಸುವಾಗ ಅದರ ಉದ್ದೇಶ ವಿವರಿಸಿ ಮತ್ತು ಅವರು ಇದರಿಂದ ಏನನ್ನು ಕಲಿಯಬಹುದು ಎಂಬುದರ ಬಗ್ಗೆ ಮುನ್ಸೂಚನೆ ಕೊಟ್ಟಿರಿ. ಕಥೆಯಲ್ಲಿ ಬರುವ ಕೆಲವು ಮುಖ್ಯ ಪದಗಳು ಅಥವಾ ಕಥೆಗೆ ಆಧಾರವಾದ ಪರಿಕಲ್ಪನೆಯ ಬಗ್ಗೆ ತಿಳಿಸಿರಿ. ಸಾಂಪ್ರದಾಯಿಕ ಕಥೆ ಹೇಳುವವರನ್ನು ಶಾಲೆಗೆ ಕರೆಸಬಹುದು ಆದರೆ ಕಲಿಯಬೇಕಾದ ಅಂಶಗಳ ಬಗ್ಗೆ ಕಥೆ ಹೇಳುವವರಿಗೆ ಮತ್ತು ಮಕ್ಕಳಿಗೆ ಸ್ಪಷ್ಟತೆ ಇರಬೇಕು.

ಕಥೆ ಹೇಳುವ ಕ್ರಿಯೆ ಕೇಳಿಸಿಕೊಳ್ಳುವುದಷ್ಟಕ್ಕೇ ಸೀಮಿತಗೊಳ್ಳದೆ, ಇತರ ಅನೇಕ ಚಟುವಟಿಕೆಗಳನ್ನು ಹುಟ್ಟುಹಾಕಬಲ್ಲದು. ಮಕ್ಕಳು ಕಥೆಯಲ್ಲಿ ಕೇಳಿಸಿಕೊಂಡ ಬಣ್ಣಗಳನ್ನೆಲ್ಲಾ ಪಟ್ಟಿ ಮಾಡಬಹುದು, ಚಿತ್ರ ಬರೆಯಬಹುದು, ಕಥೆಯ ಮುಖ್ಯ ಸಂಗತಿಗಳನ್ನು ನೆನಪಿಸಿಕೊಳ್ಳಬಹುದು ಅಥವಾ ಅಂತ್ಯವನ್ನು ಬದಲಾಯಿಸಬಹುದು.  ತರಗತಿಯನ್ನು ಸಣ್ಣ ಗುಂಪುಗಳನ್ನಾಗಿ ಮಾಡಿ, ಚಿತ್ರ ಅಥವಾ ಕಥೆಗೆ ಸಂಬಂಧಿಸಿದ ರಂಗ ಪರಿಕರಗಳನ್ನು ಕೊಟ್ಟು ಇನ್ನೊಂದು ಬೇರೆಯಾದ ದೃಷ್ಟಿಕೋನದಿಂದ ಕಥೆ ಹೇಳಲು ಅವಕಾಶ ನೀಡಬಹುದು. ಕಥೆಯನ್ನು ವಿಶ್ಲೇಷಿಸಿ ಮಕ್ಕಳು ಕಲ್ಪನಾಂಶಗಳು ಯಾವುವು, ವಾಸ್ತವಾಂಶಗಳು ಯಾವುವು ಎಂದು ಗುರುತಿಸಬಹುದು, ಕಥೆಯಲ್ಲಿ ಬರುವ ವಿದ್ಯಮಾನಗಳ ವೈಜ್ಞಾನಿಕ ವಿವರಣೆಗಳನ್ನು ಚರ್ಚಿಸಲು ಹೇಳಬಹುದು ಅಥವಾ ಗಣಿತದ ಸಮಸ್ಯೆಗಳನ್ನು ಬಿಡಿಸಲು ಹೇಳಬಹುದು.

ಮಕ್ಕಳು ಸ್ವತಃ ತಾವೇ ಕಥೆ ಹೆಣೆಯಲು ಹೇಳುವುದು ಬಹಳ ಪ್ರಭಾವಶಾಲೀ ತಂತ್ರ. ನೀವು ಅವರಿಗೆ ಕಥೆಯ ಸ್ವರೂಪ, ವಿಷಯ ಮತ್ತು ಭಾಷೆಯ ಚೌಕಟ್ಟು ನೀಡಿದರೆ, ಮಕ್ಕಳು ತಮ್ಮ ಕಥೆಯನ್ನು ತಾವೇ ಹೇಳಬಹುದು. ಅಷ್ಟೇ ಏಕೆ,ಗಣಿತ ಮತ್ತು ವಿಜ್ಞಾನದ ಕಠಿಣ

ಐಡಿಯಾಗಳನ್ನು ಸಹ ಕಥಾರೂಪದಲ್ಲಿ ಹೇಳುವರು. ಒಟ್ಟಾರೆ ಅವರು, ಐಡಿಯಾಗಳೊಡನೆ ಚೆಲ್ಲಾಡಿ, ಅರ್ಥಗಳನ್ನು ಪರಿಶೋಧಿಸಿ, ಅಮೂರ್ತ ಕಲ್ಪನೆಗಳನ್ನು ಅರ್ಥೈಸಿಕೊಳ್ಳಲು ಅವರ ಕಥೆಗಳ ರೂಪಕಗಳನ್ನು ಬಳಸುವರು.

**ಹಾಡುಗಳು**

ತರಗತಿಯಲ್ಲಿ ಹಾಡು ಮತ್ತು ಸಂಗೀತವನ್ನು ಬಳಸುವುದರಿಂದ ಹೆಚ್ಚು ವಿದ್ಯಾರ್ಥಿಗಳು ಕೊಡುಗೆ ನೀಡಲು, ಯಶಸ್ವಿಯಾಗಲು ಮತ್ತು ಚೆನ್ನಾಗಿ ಕಲಿಯಲು ದಾರಿ ಮಾಡಿಕೊಡಬಹುದು. ಒಟ್ಟಿಗೆ ಹಾಡುವುದು ಎಲ್ಲರನ್ನೂ ಒಗ್ಗೂಡಿಸುತ್ತದೆ ಮತ್ತು ಪ್ರತಿಯೊಬ್ಬರಿಗೂ ತಾವು ಆ ಚಟುವಟಿಕೆಯ ಭಾಗ ಎನಿಸುತ್ತದೆ. ಏಕೆಂದರೆ ಇಲ್ಲಿ ವೈಯಕ್ತಿಕ ಕಾರ್ಯನಿರ್ವಹಣೆ ಕೇಂದ್ರದಲ್ಲಿರುವುದಿಲ್ಲ. ಹಾಡಿನಲ್ಲಿರುವ ಪ್ರಾಸ ಮತ್ತು ಲಯ ನೆನಪಿನಲ್ಲಿ ಉಳಿಯುತ್ತದೆ ಹಾಗೂ ಭಾಷೆ ಮತ್ತು ಮಾತಿನ ಬೆಳವಣಿಗೆಗೆ ಸಹಾಯಕಾರಿಯಾಗಿರುತ್ತದೆ.

ನೀವೇ ಬಹುಶಃ ಒಳ್ಳೆಯ ಹಾಡುಗಾರರಲ್ಲದಿರಬಹುದು, ಆದರೆ ತರಗತಿಯಲ್ಲಂತೂ ನಿಮ್ಮ ಸಹಾಯಕ್ಕೆ ಒಳ್ಳೆಯ ಹಾಡುಗಾರರು ಸಿಕ್ಕೇ ಸಿಗುತ್ತಾರೆ. ನೀವು ಚಲನೆ ಮತ್ತು ಹಾವಭಾವಗಳನ್ನು ಬಳಸಿ ಹಾಡನ್ನು ಜೀವಂತಗೊಳಿಸಬಹುದು ಮತ್ತು ಅದರ ಅರ್ಥವನ್ನು ತಿಳಿಸಬಹುದು. ನಿಮಗೆ ತಿಳಿದಿರುವ ಹಾಡುಗಳ ಪದಗಳನ್ನು ನಿಮ್ಮ ಉದ್ದೇಶಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಂಡು, ಬಳಸಬಹುದು. ಮಾಹಿತಿಯನ್ನು ನೆನಪಿನಲ್ಲಿಟ್ಟುಕೊಳ್ಳಲು ಹಾಡುಗಳು ಬಹಳ ಉಪಯುಕ್ತವಾಗುತ್ತವೆ. ಸೂತ್ರಗಳು ಮತ್ತು ಪಟ್ಟಿಗಳನ್ನು ಹಾಡು ಅಥವಾ ಪದ್ಯಗಳನ್ನಾಗಿ ಮಾಡಬಹುದು. ಪುನರಾವರ್ತನೆಗಾಗಿ ನಿಮ್ಮ ಮಕ್ಕಳೇ ಹೊಸ ಹೊಸ ಹಾಡುಗಳನ್ನು ಅಥವಾ ಮಂತ್ರಗಳನ್ನು ಖಂಡಿತವಾಗಿಯೂ ಸೃಷ್ಟಿಸಬಲ್ಲರು.

**ಪಾತ್ರಾಭಿನಯ**

ಮಕ್ಕಳಿಗೆ ಅಭಿನಯಿಸಲು ಅಥವಾ ನಾಟಕವಾಡಲು ಒಂದು ಪಾತ್ರವಿದ್ದಾಗ, ಅದು ಪಾತ್ರಾಭಿನಯವಾಗುತ್ತದೆ. ಒಂದು ಸಣ್ಣ ಸನ್ನಿವೇಶದಲ್ಲಿ, ಅವರ ಪಾತ್ರದ ಉದ್ದೇಶಗಳು ಮತ್ತು ಗುಣಲಕ್ಷಣಗಳಿಗೆ ಅನುಗುಣವಾಗಿ ಅವರು ಮಾತನಾಡುತ್ತಾರೆ, ಅಭಿನಯಿಸುತ್ತಾರೆ. ಶಿಕ್ಷಕರು ಪಾತ್ರ ವಹಿಸಲು ಅಗತ್ಯವಾದ ಮಾಹಿತಿಯನ್ನು ಆವಶ್ಯವಾಗಿ ಕೊಡಬೇಕು. ಆದರೆ, ಆ ಪಾತ್ರ ಏನು ಹೇಳುತ್ತದೆ ಎನ್ನುವುದನ್ನು ಬಿಟ್ಟುಕೊಡಬಾರದು. ಪಾತ್ರಾಭಿನಯ ಮಾಡುತ್ತಿರುವ ಮಕ್ಕಳು ತಮ್ಮ ಚಿಂತನೆಗಳು ಮತ್ತು ಭಾವನೆಗಳನ್ನು ಸಹಜವಾಗಿ ಹೇಳಲು ಉತ್ತೇಜನವಿರಬೇಕು.

ಪಾತ್ರಾಭಿನಯದಿಂದ ಅನೇಕ ಅನುಕೂಲಗಳಿವೆ. ಏಕೆಂದರೆ ಇದು:

- ಬೇರೆಯವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು ನೈಜ ಸನ್ನಿವೇಶಗಳಲ್ಲಿ ಹುಡುಕಾಟ ನಡೆಸುತ್ತದೆ.
- ನಿರ್ಧಾರಗಳನ್ನು ತೆಗೆದುಕೊಳ್ಳುವ ಕೌಶಲಗಳನ್ನು ಬೆಳೆಸುತ್ತದೆ.
- ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸುತ್ತದೆ ಮತ್ತು ಎಲ್ಲರೂ ತಮ್ಮ ಕೊಡುಗೆಯನ್ನು ನೀಡುವುದಕ್ಕೆ ಅವಕಾಶ ಕಲ್ಪಿಸುತ್ತದೆ.
- ಉನ್ನತ ಮಟ್ಟದ ಚಿಂತನೆಯನ್ನು ಪ್ರೋತ್ಸಾಹಿಸುತ್ತದೆ.

ಪಾತ್ರಾಭಿನಯದಿಂದ, ಸಣ್ಣ ವಯಸ್ಸಿನ ವಿದ್ಯಾರ್ಥಿಗಳು ವೈವಿಧ್ಯಮಯ ಸಾಮಾಜಿಕ ಸನ್ನಿವೇಶಗಳಲ್ಲಿ ಮಾತನಾಡಲು ವಿಶ್ವಾಸ ಮೂಡುತ್ತದೆ. ಉದಾಹರಣೆಗೆ, ಅಂಗಡಿಯಲ್ಲಿ ಸಾಮಾನು ಕೊಳ್ಳುತ್ತಿರುವಂತೆ, ಪ್ರವಾಸಿಗರಿಗೆ ಊರಿನಲ್ಲಿರುವ ಮುಖ್ಯ ಪ್ರವಾಸೀ ತಾಣಕ್ಕೆ ದಾರಿ ತೋರಿಸುವಂತೆ ಅಥವಾ ಟಿಕೆಟ್ ಕೊಳ್ಳುವುದನ್ನು ಅಭಿನಯ ಮಾಡಿಸಬಹುದು. ಸರಳವಾದ ಕೆಲವೇ ರಂಗ ಸಜ್ಜಿಕೆ ವಸ್ತುಗಳನ್ನು ಇಟ್ಟು ಸನ್ನಿವೇಶ ಸೃಷ್ಟಿಸಬಹುದು. ಕೆಲವು ಫಲಕಗಳನ್ನು - ದರ್ಶಿನಿ/ಚಹಾ ಅಂಗಡಿ, ಡಾಕ್ಟರ್ ಕ್ಲಿನಿಕ್ ಅಥವಾ ಪಂಚರ್ ಅಂಗಡಿ ಎನ್ನುವ ಫಲಕಗಳನ್ನು ಇಟ್ಟು, 'ಇಲ್ಲಿ ಯಾರು ಕೆಲಸ ಮಾಡುತ್ತಾರೆ', 'ಅವರೇನು ಹೇಳುತ್ತಾರೆ?' ಮತ್ತು 'ನಾವೇನು ಹೇಳುತ್ತೇವೆ?' ಎಂದು ಮಕ್ಕಳನ್ನು ಕೇಳಬಹುದು. ಅವರು ಈ ಪಾತ್ರಗಳಾಗಿ ಸಂಭಾಷಣೆ ನಡೆಸಲು ಅವಕಾಶ ಕೊಟ್ಟು, ಭಾಷಾ ಬಳಕೆಯನ್ನು ಗಮನಿಸಬಹುದು.

ಪಾತ್ರಾಭಿನಯ, ದೊಡ್ಡ ಮಕ್ಕಳಲ್ಲಿ ಜೀವನ ಕೌಶಲಗಳನ್ನು ಬೆಳಸಬಹುದು. ಉದಾಹರಣೆಗೆ, ತರಗತಿಯಲ್ಲಿ ಒಂದು ಘರ್ಷಣೆಯನ್ನು ಬಗೆ ಹರಿಸುತ್ತಿರುವ ಮಾರ್ಗಗಳನ್ನು ಹುಡುಕುತ್ತಿರುವಿರಿ ಎಂದುಕೊಳ್ಳೋಣ. ಆಗ ಶಾಲೆ ಅಥವಾ ಸಮುದಾಯದಲ್ಲಿ ಹಿಂದೆ ನಡೆದ ನೈಜ ಘಟನೆಯ ಮೂಲಕ ವಿವರಿಸುವ ಬದಲು ಇದೇ ರೀತಿ ಇರುವ, ಇವೇ ಸವಾಲುಗಳನ್ನು ತೆರೆದಿಡುವ ಆದರೆ ಇಲ್ಲಿಗೆ ನೇರ ಸಂಬಂಧವಿಲ್ಲದಿರುವ ಸನ್ನಿವೇಶವನ್ನು ಬಳಸುವುದು ಉತ್ತಮ. ಮಕ್ಕಳು ವಹಿಸುವ ಪಾತ್ರಗಳನ್ನು ನೀವೇ ನಿರ್ಧರಿಸಿ ಅಥವಾ ಅವರಿಗೆ ಸ್ವತಃ ಆಯ್ಕೆಯ ಸ್ವಾತಂತ್ರ್ಯ ಕೊಡಿ. ಅವರಿಗೆ ಯೋಜಿಸಲು ಸಮಯ ಕೊಡಿ ಅಥವಾ ತತ್‌ಕ್ಷಣವೇ ಪಾತ್ರಾಭಿನಯ ಮಾಡಲು ಹೇಳಿ. ಪಾತ್ರಾಭಿನಯ ಇಡೀ ತರಗತಿಯಲ್ಲಿ ಪ್ರಸ್ತುತಪಡಿಸಬಹುದು ಅಥವಾ ಯಾವುದೇ ಗುಂಪನ್ನು ನೋಡದೇ, ವಿದ್ಯಾರ್ಥಿಗಳು ಸಣ್ಣ ಗುಂಪುಗಳಲ್ಲಿ ಕೆಲಸ ಮಾಡಬಹುದು. ಇಲ್ಲಿನ ಮುಖ್ಯ

ಉದ್ದೇಶ ಪಾತ್ರಾಭಿನಯದ ಅನುಭವ ಮತ್ತು ಒಳಗಿದ್ದದ್ದು ಪ್ರಕಟವಾಗುವುದೇ ಹೊರತು ಉನ್ನತ ಮಟ್ಟದ ಅಭಿನಯದ ಪ್ರದರ್ಶನ ಅಥವಾ ಬಾಲಿವುಡ್ ನಟನಾ ಪ್ರಶಸ್ತಿಯಲ್ಲ.

ವಿಜ್ಞಾನ ಮತ್ತು ಗಣಿತದಲ್ಲೂ ಪಾತ್ರಾಭಿನಯವನ್ನು ಬಳಸುವ ಸಾಧ್ಯತೆಗಳಿವೆ. ಕಣಗಳು ಪರಸ್ಪರ ಸಂಧಿಸಿದಾಗ ಅಥವಾ ಬೆಳಕು ಅಥವಾ ಶಾಖದ ಪ್ರಭಾವದಿಂದ ಉಂಟಾಗುವ ಬದಲಾವಣೆಗಳನ್ನು ತೋರ್ಪಡಿಸುವ ಗುಣಲಕ್ಷಣಗಳನ್ನು ಬಳಸಿಕೊಂಡು, ವಿದ್ಯಾರ್ಥಿಗಳು ಪರಮಾಣುಗಳು ವರ್ತಿಸುವ ರೀತಿಯನ್ನು ಅನುಕರಿಸಿ ಅಭಿನಯಿಸಬಹುದು. ಗಣಿತದಲ್ಲಿ ವಿದ್ಯಾರ್ಥಿಗಳು ಕೋನ ಮತ್ತು ಆಕೃತಿಗಳ ಪಾತ್ರಾಭಿನಯ ಮಾಡಿ ಅವುಗಳ ಲಕ್ಷಣ ಮತ್ತು ವಿವಿಧ ಸೇರುವಿಕೆ (combinations) ಗಳನ್ನು ಕಂಡುಕೊಳ್ಳಬಹುದು.

**ನಾಟಕ**

ನಾಟಕ, ಬಹಳಷ್ಟು ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದಕ್ಕೆ ಬಳಸಬಹುದಾದ ಉತ್ತಮ ಮಾರ್ಗೋಪಾಯ.  ನಾಟಕವು ಅನೇಕ ಕೌಶಲಗಳು ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ನಿಮ್ಮ ವಿದ್ಯಾರ್ಥಿಗಳು ಒಂದು ವಿಷಯವನ್ನು ಅರ್ಥೈಸಿಕೊಂಡಿರುವುದನ್ನು ಮೌಲ್ಯಾಂಕನ ಮಾಡಲು ನಾಟಕವನ್ನು ಬಳಸಬಹುದು.  ಮಿದುಳು ಕೆಲಸ ಮಾಡುವ ರೀತಿಯನ್ನು ತಾವು ಅರ್ಥೈಸಿಕೊಂಡಿರುವುದನ್ನು ವಿದ್ಯಾರ್ಥಿಗಳು ಈ ರೀತಿ ತೋರಿಸಬಹುದು - ಆಟದ ಫೋನ್ ಬಳಸಿಕೊಂಡು, ಒಂದು ನಾಟಕದ ಮೂಲಕ ಮಿದುಳಿನಿಂದ ಕಿವಿ, ಕಣ್ಣು, ಮೂಗು, ಕೈ ಮತ್ತು ಬಾಯಿಗೆ ಸಂದೇಶಗಳು ತಲುಪಿ ಮತ್ತೆ ವಾಪಸ್ ರವಾನೆಯಾಗುವುದನ್ನು ತೋರಿಸಬಹುದು. ಅಥವಾ ಸಂಖ್ಯೆಗಳನ್ನು ಕಳೆಯುವುದನ್ನು ಮರೆಯುವುದರಿಂದ ಆಗುವ ಆಭಾಸಗಳನ್ನು ತೋರಿಸುವ ಸಣ್ಣ ಮೋಜಿನ ನಾಟಕವೊಂದರಿಂದ ಎಳೆ ಮನಸ್ಸುಗಳಲ್ಲಿ ಸರಿಯಾದ ಕ್ರಮವನ್ನು ನಾಟಿಸುವ ಸಾಧ್ಯತೆ ಇರಬಹುದು.

ಅನೇಕ ಸಲ, ನಾಟಕ ಇಡೀ ತರಗತಿ, ಪೋಷಕರು ಅಥವಾ ಸಮುದಾಯಕ್ಕೆ ಪ್ರದರ್ಶನವಾಗಿ ಬೆಳೆಯುತ್ತದೆ. ಈ ಗುರಿ ಮಕ್ಕಳಿಗೆ ಪ್ರೇರೇಪಣೆಯಾಗಿ, ಅವರು ಕಾರ್ಯ ನಿರತರಾಗಿರುವಂತೆ ಮಾಡುತ್ತದೆ.  ನಾಟಕದ ಸೃಷ್ಟಿ ಕಾರ್ಯದಲ್ಲಿ ಇಡೀ ತರಗತಿ ತೊಡಗಿಕೊಳ್ಳಬೇಕು. ಮಕ್ಕಳ ಆತ್ಮವಿಶ್ವಾಸದಲ್ಲಿ ಇರುವ ಭಿನ್ನತೆಯನ್ನು ಗುರುತಿಸುವುದು ಮುಖ್ಯ. ಎಲ್ಲ ಮಕ್ಕಳೂ ನಟ/ನಟಿಯರಾಗಬೇಕಿಲ್ಲ. ಮಕ್ಕಳು ತಮ್ಮ ತಮ್ಮ ಪ್ರತಿಭೆ ಮತ್ತು ವ್ಯಕ್ತಿತ್ವಕ್ಕೆ ಅನುಗುಣವಾಗಿ ವಿವಿಧ ರೀತಿಯ ಕೊಡುಗೆಗಳನ್ನು ನೀಡಬಹುದು (ಉದಾಹರಣೆಗೆ: ಸಂಘಟನೆ, ವೇಷ ಭೂಷಣ, ರಂಗಸಜ್ಜಿಕೆ, ರಂಗ ಸಹಾಯ).

ನಿಮ್ಮ ವಿದ್ಯಾರ್ಥಿಗಳ ಕಲಿಕೆಯಲ್ಲಿ ನಾಟಕವನ್ನು ಏಕೆ ಬಳಸುತ್ತಿದ್ದೀರಿ ಎನ್ನುವುದರ ಬಗ್ಗೆ ಚಿಂತನೆ ನಡೆಸುವುದು ಬಹಳ ಮುಖ್ಯ. ಭಾಷೆಯನ್ನು ಕಲಿಸಲೋ (ಉದಾ: ಪ್ರಶ್ನೆ ಕೇಳುವುದು ಮತ್ತು ಉತ್ತರಿಸುವುದು), ವಿಷಯದ ಕಲಿಕೆಗೋ (ಉದಾ: ಗಣಿಗಾರಿಕೆಯಿಂದಾಗುವ ಪಾರಿಸಾರಿಕ ಪರಿಣಾಮಗಳು) ಅಥವಾ ನಿರ್ದಿಷ್ಟ ಕೌಶಲಗಳನ್ನು ಬೆಳೆಸುವುದಕ್ಕೋ (ಉದಾ: ಜೊತೆಗೂಡಿ ತಂಡದಲ್ಲಿ ಕೆಲಸ ಮಾಡುವುದು)? ಪ್ರದರ್ಶನವನ್ನು ಗುರಿಯಾಗಿಸಿಕೊಂಡು, ನಾಟಕದಿಂದಾಗಬಹುದಾದ ಕಲಿಕೆ ಹಿಂದೆ ಸರಿಯದಂತೆ ನೋಡಿಕೊಳ್ಳುವ ಜಾಗರೂಕತೆ ಇರಬೇಕು.

## ಸಂಪನ್ಮೂಲ 2: ಮೂರು ಕಥೆಗಳು

## ‘ಗುಬ್ಬಚ್ಚಿ ಕಾಳು ತಿಂದ ಕಥೆ’

ಒಂದು ಊರಿನಲ್ಲಿ ಒಬ್ಬ ರಾಜ ದ್ದನಂತೆ. ಅವನು ತುಂಬಾ ಜಾಣ ಅಂತೆ. ಒಂದು ದಿನ ಅವನು, ಅವನಿಗೆ ಕಥೆ ಹೇಳಿ ಸುಸ್ತು ಮಾಡಿಸಲು ಆದವರಿಗೆ ಒಂದು ಲಕ್ಷ ರೂಪಾಯಿ ಬಹುಮಾನ ಕೊಡುವುದಾಗಿ ರಾಜ್ಯದಲ್ಲೆಲ್ಲಾ ಡಂಗುರ ಹೊಡೆಸಿದ. ಅವನಿಗೆ ಕಥೆ ಹೇಳಿ ಸುಸ್ತಾದರೆ, ಕಥೆ ಕೇಳುವಾಗ ಹುಂ! ಹುಂ! ಎನ್ನುವುದನ್ನು ನಿಲ್ಲಿಸಿದರೆ, ಸೋಲು ಒಪ್ಪಿಕೊಂಡು ಬಹುಮಾನ ಕೊಡುವುದಾಗಿ ಹೇಳಿದ.

ಸರಿ, ಎಲ್ಲಾ ಕಡೆಯಿಂದ ಜನ ಬಂದರು. ಕಥೆ ಆದ ಮೇಲೆ ಕಥೆ ಕಥೆ ಹೇಳಿದರು, ಅವರಿಗೆ ಸುಸ್ತಾಯಿತು. ರಾಜನಿಗೆ ಮಾತ್ರ ಆಯಾಸ ಆಗಲಿಲ್ಲ. ಅವನು ಹುಂ! ಹುಂ! ಅನ್ನೋದನ್ನ ನಿಲ್ಲಿಸಲೇ ಇಲ್ಲ.

ಕೊನೆಗೆ ದೂರದ ಊರಿನಿಂದ ಒಬ್ಬ ಒಳ್ಳೆಯ ಕಥೆಗಾರ ಬಂದ. ಅವನು ರಾಜನಿಗೆ ಸುಮಾರು ದೊಡ್ಡ --- ದೊಡ್ಡ--- ಕಥೆಗಳನ್ನು ಹೇಳಿದ. ರಾಜನಿಗೆ ಸುಸ್ತೇ ಆಗಲಿಲ್ಲ. ಕಥೆಗಾರನ ಹತ್ತಿರ ಇದ್ದ ಎಲ್ಲ ಕಥೆಗಳೂ ಮುಗಿದು ಹೋದವು. ಸರಿ, ರಾಜನ ಹತ್ತಿರ ಸೋಲು ಒಪ್ಪಿಕೊಂಡು ಆಚೆ ಬರುವಾಗ ಒಬ್ಬ ಹಳೆಯ ಸ್ನೇಹಿತ ಸಿಕ್ಕಿದ. ‘ಏಕೆ ಇಷ್ಟು ಬೇಜಾರಿನಲ್ಲಿ ಇರುವೆ’? ಎಂದು ಕೇಳಿದ. ಅವನು ಕೇಳಿದ್ದೇ ತಡ ಕಥೆಗಾರ ಎಲ್ಲ

ವಿಷಯವನ್ನು ಹೇಳಿ, ಮನಸ್ಸನ್ನು ಹಗುರ ಮಾಡಿಕೊಂಡ. ಅದಕ್ಕೆ ಅವನ ಸ್ನೇಹಿತ 'ಅಷ್ಟೇನಾ' 'ನಿನ್ನ ರಾಜನಿಗೆ ಸರಿಯಾದ ಕಥೆಯನ್ನು ನಾನು ಹೇಳುತ್ತೇನೆ ಬಿಡು' ಎಂದ. ಕಥೆಗಾರ ಬೇಡವೆಂದರೂ ಕೇಳದೆ, ಅವನ ಸ್ನೇಹಿತ ರಾಜನ ಹತ್ತಿರ ಹೋಗಿ ಕಥೆ ಹೇಳುವುದಕ್ಕೆ ಶುರು ಮಾಡಿದ.

ಒಂದಾನೊಂದು ಕಾಲದಲ್ಲಿ, ಒಂದು ಊರಿನಲ್ಲಿ ಒಬ್ಬ ರಾಜ ಇದ್ದ. ಊರಿನ ಬಳಿ ಒಂದು ಕೆರೆ ಇತ್ತು. ಕೆರೆಯ ಪಕ್ಕದಲ್ಲಿ ದೊಡ್ಡ ಆಲದ ಮರ ಇತ್ತು. ಆಲದ ಮರದ ಕೆಳಗಡೆಯೇ ಒಬ್ಬ ರೈತ, ರಾಗಿ ಕೊಯ್ಲು ಮಾಡಿ, ಕಾಳು ಬಡಿದು ಕಣಜದಲ್ಲಿ ಹಾಕಿ ಇಟ್ಟಿದ್ದ. ಆ ಮರದ ಮೇಲೆ ಸಾವಿರಾರು ಗುಬ್ಬಚ್ಚಿಗಳಿದ್ದವು. ಪ್ರತಿಯೊಂದು ಗುಬ್ಬಚ್ಚಿಯೂ ಒಂದು ರಾಗಿ ಕಾಳು ತಿಂದು, ಒಂದು ತೊಟ್ಟು ನೀರು ಕುಡಿದು, ಹಾರಿ ಹೋಗಿ ಮರದ ಮೇಲೆ ಕುಳಿತುಕೊಳ್ಳುತ್ತಾ ಇತ್ತು. ರೈತ ಮರದ ಕೆಳಗೆ ಇಪ್ಪತ್ತು ದೊಡ್ಡ ಕಣಜ ಇಟ್ಟಿದ್ದ. ಆಮೇಲೆ ಪ್ರತಿದಿನ ಒಂದು ಗುಬ್ಬಚ್ಚಿ ಮರದಿಂದ ಕೆಳಗೆ ಬಂದು, ಒಂದು ಕಾಳು ರಾಗಿ ತಿಂದು, ಒಂದು ತೊಟ್ಟು ನೀರು ಕುಡಿದು, ಹಾರಿ ಹೋಗಿ ಮರದ ಮೇಲೆ ಕುಳಿತುಕೊಳ್ಳುತ್ತಾ ಇತ್ತು. ಮಾರನೇಯ ದಿನ ಪ್ರತಿಯೊಂದು ಗುಬ್ಬಚ್ಚಿ ಮರದಿಂದ ಕೆಳಗೆ ಬಂದು, ಒಂದು ಕಾಳು ರಾಗಿ ತಿಂದು, ಒಂದು ತೊಟ್ಟು ನೀರು ಕುಡಿದು, ಹಾರಿ ಹೋಗಿ ಮರದ ಮೇಲೆ ಕುಳಿತುಕೊಳ್ಳುತ್ತಾ ಇತ್ತು. ಮಾರನೇಯ ದಿನ ಪ್ರತಿಯೊಂದು ಗುಬ್ಬಚ್ಚಿ ಮರದಿಂದ ಕೆಳಗೆ ಬಂದು, ಒಂದು ಕಾಳು ರಾಗಿ ತಿಂದು, ಒಂದು ತೊಟ್ಟು ನೀರು ಕುಡಿದು, ಹಾರಿ ಹೋಗಿ ಮರದ ಮೇಲೆ ಕುಳಿತುಕೊಳ್ಳುತ್ತಾ ಇತ್ತು.

ಈ ತರಹ ಗುಬ್ಬಚ್ಚಿ ಕಾಳು ತಿಂದ ಕಥೆಯನ್ನು ಕಥೆಗಾರನ ಸ್ನೇಹಿತ ಹೇಳುತ್ತಲೇ ಇದ್ದ. ಸರಿ, ಕೊನೆಗೆ ರಾಜನಿಗೆ ಹುಂ! ಹುಂ! ಅಂತ ಹೇಳಿ ಸುಸ್ತಾಯಿತು. ಕಥೆ ಮುಗಿಯಲೇ ಇಲ್ಲ. ಕಥೆಗಾರನ ಸ್ನೇಹಿತ ಮುಂದುವರೆಸಿದ. ರಾಗಿ ಕಾಳು ಮುಗಿಯಲಿಲ್ಲ. ಒಂದು ಗುಬ್ಬಚ್ಚಿ ಹೋಗಿ, ಒಂದು ಕಾಳು ರಾಗಿ ತಿಂದು, ಒಂದು ತೊಟ್ಟು ನೀರು ಕುಡಿದು, ಹಾರಿ ಹೋಗಿ ಮರದ ಮೇಲೆ ಕುಳಿತು ಕೊಳ್ಳುತ್ತಾ ಇತ್ತು. ಅದಾದ ಮೇಲೆ ಇನ್ನೊಂದು ಗುಬ್ಬಚ್ಚಿ ಹೋಗಿ ಒಂದು ಕಾಳು ರಾಗಿ ತಿಂದು, ಒಂದು ತೊಟ್ಟು ನೀರು ಕುಡಿದು, ಹಾರಿ ಹೋಗಿ ಮರದ ಮೇಲೆ ಕುಳಿತು ಕೊಳ್ಳುತ್ತಾ ಇತ್ತು. ರಾಜನಿಗೆ ಬೇಜಾರಾಗಿ ಹೋಯ್ತು. ಥೂ! ನಿನ್ನ ತಿರುಗಿ ತಿರುಗಿ ಅದನ್ನೇ ಹೇಳುತ್ತಿದ್ದೀಯಾ? ಹೋಗ್ಲಿ ಎಷ್ಟು ಕಣಜ ರಾಗಿ ಮುಗಿಯಿತು?

ಅಯ್ಯೋ! ಮಹಾಸ್ವಾಮಿ ಗುಬ್ಬಚ್ಚಿಗಳು ಇನ್ನೂ ಕಾಲು ಕಣಜ ರಾಗಿ ಕಾಳನ್ನು ತಿಂದಿಲ್ಲ. ಅವುಗಳಿಗೆ ತಿನ್ನಕ್ಕೆ ಬೇಕಾದಷ್ಟು ಕಾಳಿದೆ. ನನಗೆ ಹೇಳಕ್ಕೂ ಕಥೆ ಬಾಕಿ ಇದೆ. ಒಂದು ಗುಬ್ಬಚ್ಚಿ ಬಂದು, ಒಂದು ಕಾಳು ರಾಗಿ ತಿಂದು, ಒಂದು ತೊಟ್ಟು ನೀರು ಕುಡಿದು, ಹಾರಿ ಹೋಗಿ ಮರದ ಮೇಲೆ ಕುಳಿತು ಕೊಳ್ಳುತ್ತಾ ಇತ್ತು. ಎಂದ ರಾಜ ಅಯ್ಯೋ! ಅಯ್ಯೋ! ಇಪ್ಪತ್ತು ಕಣಜದಲ್ಲಿರೋ ಕಾಳು ಯಾವಾಗ ಮುಗಿಯೋದು? ಸಾಕಪ್ಪಾ ಸಾಕು! ನೀನೇ ಗೆದ್ದೆ. ತಗೋ ನಿನ್ನ ಬಹುಮಾನ! ಅಂತ ಹೇಳಿ ಅವನನ್ನು ಕಳುಹಿಸಿದ.

ಇಬ್ಬರೂ ಸ್ನೇಹಿತರು ಆಚೆ ಹೋಗಿ ಇನ್ನು ಮುಂದೆ ರಾಜ ಯಾವ ಕಥೆಗಾರನಿಗೂ ತೊಂದರೆ ಕೊಡುವುದಿಲ್ಲ ಎಂದು ಮಾತನಾಡಿಕೊಂಡು ಸಂತೋಷಪಟ್ಟರು.

**'ನಾಯಿ ಮತ್ತು ಅದರ ನೆರಳು'**

ಒಂದು ನಾಯಿ ಮಾಂಸದ ತುಂಡನ್ನು ಕಚ್ಚಿಕೊಂಡು ಸೇತುವೆಯ ಮೇಲೆ ನಡೆಯುತ್ತ ಸಣ್ಣ ಹಳ್ಳವನ್ನು ದಾಟುತ್ತಿತ್ತು. ನೀರಿನಲ್ಲಿ ನಾಯಿಯೊಂದು ತನ್ನಂತೆಯೇ ಮಾಂಸದ ಚೂರನ್ನು ಕಚ್ಚಿಕೊಂಡಿರುವದು ಕಾಣಿಸಿತು. ಅದರ ಬಾಯಲ್ಲಿದ್ದ ಮಾಂಸದ ಚೂರನ್ನು ಪಡೆಯಬೇಕೆಂಬ ದುರಾಸೆಯಿತು ನಾಯಿಗೆ. ಬೌ ಬೌ ಎಂದು ಬಗುಳುತ್ತ ನೀರಿಗೆ ಧುಮುಕಿತು. ಆಗ ಅದಕ್ಕೆ ತಿಳಿಯಿತು ನೀರಿನಲ್ಲಿದ್ದ ನಾಯಿ ತನ್ನ ನೆರಳೆಂದು! ಅಷ್ಟುಹೊತ್ತಿಗೆ ಅದರ ಬಾಯಿಯಲ್ಲಿದ್ದ ಮಾಂಸದ ಚೂರು ಹಳ್ಳದ ನೀರಿನಲ್ಲಿ ಕೊಚ್ಚಿಕೊಂಡು ಹೋಗಿತ್ತು.

**'ಕರ್‍ರನೆಯ ಇಲಿ'**

ಒಂದು ಕಾಡಿನಲ್ಲಿ ಕರ್‍ರನೆಯ ಇಲಿ ವಾಸಿಸುತ್ತಿತ್ತು. ಕಾಡು ಕ್ರೂರ ಪ್ರಾಣಿಗಳಿಂದ ತುಂಬಿತ್ತು. ಆದರೂ ಇಲಿ ತನ್ನ ಚುರುಕು ಬುದ್ಧಿಯಿಂದ ಬದುಕುತ್ತಿತ್ತು.  ಒಂದು ದಿನ ಒಂದು ಹಾವು ಸರ್‍ರನೆ ಇಲಿಯನ್ನು ಹಿಡಿದು ಬಿಟ್ಟಿತು. "ಆಹಾ! ಇಂದು ನೀನು ತಪ್ಪಿಸಿಕೊಳ್ಳಲಾರೆ" ಎಂದಿತು ಹಾವು. "ನಾಗಪ್ಪ, ನನ್ನ ಪ್ರಶ್ನೆಗೆ ಸರಿಯಾಗಿ ಉತ್ತರ ಕೊಟ್ಟರೆ ನೀನು ನನ್ನನ್ನು ತಿನ್ನಬಹುದು." ಎಂದಿತು ಇಲಿ. "ಆಗಲಿ," ಎಂದಿತು ನಾಗಪ್ಪ.

"ನಮ್ಮ ಕಾಡಿನಲ್ಲಿ ಕಾಗೆಗಳು ಎಷ್ಟೆಂದು ಎಣಿಸಿ ಹೇಳು" ಎಂದಿತು ಇಲಿ.  "ಈಗಲೇ ಎಣಿಸುವೆ. 1,2,3,4,………" ಎಂದು ನಾಗಪ್ಪ ಎಣಿಸಿತು. "ಎಣಿಕೆ ಮುಗಿಯಿತು.  ಈ ಕಾಡಿನಲ್ಲಿ 99 ಕಾಗೆಗಳು ಇವೆ" ಎಂದಿತು ನಾಗಪ್ಪ.

"ನಿನ್ನ ಉತ್ತರ ತಪ್ಪು, ನಮ್ಮ ಕಾಡಿನಲ್ಲಿ 85 ಕಾಗೆಗಳಿವೆ.  ಉಳಿದ 14 ಕಾಗೆಗಳು ಪಕ್ಕದ ಊರಿನಿಂದ ಇಲ್ಲಿ ನೆಂಟರ ಮನೆಗೆ ಬಂದಿವೆ."  ಎಂದು ಹೇಳಿ ಇಲಿ ಅಪಾಯದಿಂದ ಪಾರಾಯಿತು.  ಕೋಪಗೊಂಡ ನಾಗಪ್ಪ ಹೇಳಿತು "ನೆನಪಿರಲಿ, ಇಲಿಯೇ ಒಂದು ದಿನ ನಿನ್ನನ್ನು ಹಿಡಿಯುವೆ."

ಅಂದು ಹುಣ್ಣಿಮೆ. ಚಂದ್ರನ ಬೆಳದಿಂಗಳಲ್ಲಿ ಇಲಿ ಆಟವಾಡುತ್ತಿತ್ತು. ಅಲ್ಲಿಯೇ ಒಂದು ಗೂಬೆ ಬೇಟೆ ಆಡುತ್ತಿತ್ತು. ಅಲ್ಲಿಯೇ ಒಂದು ಗೂಬೆ ಬೇಟೆ ಆಡುತ್ತಿತ್ತು. ಗೂಬೆಯ ಕೈಯಲ್ಲಿ ಇಲಿ ಸಿಕ್ಕಿಹಾಕಿಕೊಂಡಿತು. ಆಹಾ! ಇಂದು ಚುರುಕು ಇಲಿಯನ್ನು ತಿಂದು ನಾನೂ ಚುರುಕು ಆಗುವೆ ಎಂದುಕೊಂಡಿತು. "ಗೂಬೆಯಣ್ಣ, ನನ್ನ ಪ್ರಶ್ನೆಗೆ ಸರಿಯಾಗಿ ನೀನು ಉತ್ತರ ಕೊಟ್ಟರೆ ಮಾತ್ರ ನೀನು ನನ್ನನ್ನು ತಿನ್ನಬಹುದು" ಎಂದಿತು ಇಲಿ. "ಬೇಗೆ ಬೇಗನೇ ಕೇಳು ನಿನ್ನ ಪ್ರಶ್ನೆ" ಎಂದಿತು ಗೂಬೆ. "ಆಕಾಶದಲ್ಲಿ ಎಷ್ಟು ನಕ್ಷತ್ರಗಳಿವೆ ಎಂದು ಎಣಿಸಿ ಹೇಳು" ಎಂದಿತು ಇಲಿ. "ಈಗಲೇ ಎಣಿಸುವೆ. 1,2,3,4,.................... ಗೂಬೆ ಇಡೀ ರಾತ್ರಿ ಎಣಿಸಿತು. ನಕ್ಷತ್ರಗಳ ಎಣಿಕೆ ಮುಗಿಯುತ್ತಾ ಬಂತು. ಆಗ ಬೆಳಗಾಗಿತ್ತು.

"ಓ ಇಲಿ, 150 ನಕ್ಷತ್ರಗಳಿವೆ" ಎಂದು ಗೂಬೆ ಹೇಳಿತು. "ನಿನ್ನ ಉತ್ತರ ತಪ್ಪು. 151 ನಕ್ಷತ್ರಗಳಿವೆ. ಸೂರ್ಯನೂ ಒಂದು ನಕ್ಷತ್ರ. ಈಗ ಬೆಳಗಾಗಿದೆ. ಸೂರ್ಯನನ್ನು ನೀನು ಎಣಿಸಬೇಕಿತ್ತು. ಆದ್ದರಿಂದ ನೀನು ಸೋತೆ" ಎಂದಿತು ಇಲಿ.

"ಹಾಗಾದರೆ ಚಂದ್ರನನ್ನು ಸಹ ಎಣಿಸಬೇಕು" ಎಂದಿತು ಗೂಬೆ. "ಪೆದ್ದೇ, ಚಂದ್ರ ನಕ್ಷತ್ರವಲ್ಲ. ಅದು ನಮ್ಮ ಭೂಮಿಯ ಉಪಗ್ರಹ," ಎಂದು ಹೇಳಿ ಇಲಿ ಓಡಿತು. "ಈ ಇಲಿಯನ್ನು ಹೇಗಾದರೂ ಮಾಡಿ ಹಿಡಿಯುವೆ" ಎಂದು ಗೂಬೆ ಶಪಥ ಮಾಡಿ ಹಾರಿ ಹೋಯಿತು.

## ಹೆಚ್ಚುವರಿ ಸಂಪನ್ಮೂಲಗಳು

- Indian folk tales: http://www.culturalindia.net/indian-folktales/
- The World Storytelling Institute's website includes resources for teachers (http://www.storytellinginstitute.org/12.html) and a wealth of links to stories, many from India (http://www.storytellinginstitute.org/87.html)
- The Storytelling in the Classroom website has a variety of ideas and stories for teachers to tell in the classroom: http://www.storyarts.org/classroom/index.html
- Katha is a publisher that has produced more than 300 books from various regions in India; it also provides training in storytelling: http://www.katha.org/site/katha-bookstore
- Kathalaya provides training and resources for teachers in storytelling in the classroom: http://kathalaya.org/
- The Tallest Story Competition includes animated stories from different tribal groups in India: http://www.talleststory.com/
- The Society for Storytelling website contains a lot of factsheets for learning about storytelling: http://www.sfs.org.uk/resources

## ಪರಾಮರ್ಶನ/ಗ್ರಂಥಸೂಚಿಗಳು


Morgan, J. and Rinvolucri, M. (1983) *Once Upon a Time*. Cambridge: Cambridge University Press.

Slattery, M. and Willis, J. (2001) *English for Primary Teachers*. Oxford: Oxford University Press.

Society for Storytelling (2004) 'Telling tales: a beginner's guide to telling stories' (online), March. Available from: http://www.sfs.org.uk/content/telling-tales-beginners-guide-telling-stories (accessed 18 November 2014).

Wakefield, D. (1992) *The Wide-Mouthed Frog*, Illustrated by Spaeth, C. SIL International.

Wright, A. (1996) *Storytelling with Children*. Oxford: Oxford University Press.


## Acknowledgements


Except for third party materials and otherwise stated below, this content is made available under a Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESS-India project and not in any subsequent OER versions. This includes the use of the TESS-India, OU and UKAID logos.

Grateful acknowledgement is made to the following sources for permission to reproduce the material in this unit:

Figure 3: courtesy of Eram Gomango from Gajipati district of Odisha

Resource 2: ‘The Wide-mouthed Frog’, extract adapted from Keith Faulkner’s ‘The Wide-mouthed Frog’; ‘An Old Tiger and a Greedy Traveler’, adapted from the *Hitopadesha*, a collection of Sanskrit fables in prose and verse from the 12th century.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.